ಜನಪ್ರಿಯ ಕಲಾಮಾಲಿಕೆ

# ಶಿಲ್ಪಕಲೆ



ವಿಜಯಾರಾವ್

ಕರ್ನಾಟಕ ಲಲಿತಕಲಾ ಅಕಾಡೆಮಿ

# ಶಿಲ್ಪಕಲೆ

ವಿಜಯಾರಾವ್

ಕರ್ನಾಟಕ ಲಲಿತಕಲಾ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು-560 002

**SHILPAKALE**
*by Vijayarao*
*Published by K. Mukundan, Registrar*
*Karnataka Lalithakala Academy*
*Nrupatunga Road, Bangalore-560 002*

First Impression : 1995

**ಬೆಲೆ : ರೂ. 5-00**

ಮುಖಚಿತ್ರ : ಯಕ್ಷಿ

ಸಂಪಾದಕರು : ಚಿ. ಸು. ಕೃಷ್ಣಸೆಟ್ಟಿ

ಮುದ್ರಣ
**ಲಕ್ಷ್ಮಿ ಮುದ್ರಣಾಲಯ**
ಚಾಮರಾಜಪೇಟೆ, ಬೆಂಗಳೂರು-18
ದೂರವಾಣಿ: 6618752, 6613123

# ಒಂದು ಮಾತು

ಕರ್ನಾಟಕ ಲಲಿತಕಲಾ ಅಕಾಡೆಮಿಯು ಇದುವರೆಗೆ ಕಲೆ ಮತ್ತು ಕಲಾವಿದರಿಗೆ ಸಂಬಂಧಿಸಿದಂತೆ ಅನೇಕ ಪುಸ್ತಕಗಳನ್ನು ಪ್ರಕಟಿಸುತ್ತಾ ಬಂದಿದೆ. ಪ್ರಸ್ತುತ ಅಕಾಡೆಮಿಯು ಜನಪ್ರಿಯ ಕಲಾ ಮಾಲಿಕೆಯಡಿಯಲ್ಲಿ ಸುಲಭ ದರದಲ್ಲಿ ಜನಸಾಮಾನ್ಯರಿಗೂ ಕಲೆಯು ಅರ್ಥವಾಗಲಿ ಎಂಬ ಉದ್ದೇಶದಿಂದ ದೃಶ್ಯಕಲೆ, ಕಲೆಯ ರಸಸ್ವಾದನೆ, ಕಲಾ ಪಂಥಗಳು ಈ ವಿಷಯವಾಗಿ ಕಿರು ಪುಸ್ತಕಗಳನ್ನು ಹೊರತರುತ್ತಿದೆ.

ಈ ಮಾಲಿಕೆಯ ಪುಸ್ತಕಗಳನ್ನು ಓದುವುದರಿಂದ ಜನಸಾಮಾನ್ಯರಲ್ಲಿ ಕಲಾ ಇತಿಹಾಸವನ್ನು ಪರಿಚಯಿಸುತ್ತಾ ಕಲಾಕೃತಿಯನ್ನು ನೋಡಿ, ಗ್ರಹಿಸಿ, ರಸಸ್ವಾದನೆ ಮಾಡಿ ಗುಣ ಮೌಲ್ಯಗಳ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಹೊಂದಿ ಉತ್ತಮ ಗುಣ ಮೌಲ್ಯವುಳ್ಳ ಕಲಾಕೃತಿಯನ್ನು ಸಂಗ್ರಹಿಸುವಲ್ಲಿ ಆಸಕ್ತಿ ಮೂಡುತ್ತದೆಯೆಂಬ ಆಶಯ ನಮ್ಮದಾಗಿದೆ.

ಈ ಮಾಲಿಕೆಯಲ್ಲಿ ಪುಸ್ತಕಗಳನ್ನು ಚಿತ್ರಯಾತ್ರೆಯ ಸಂದರ್ಭದಲ್ಲಿ ಹೊರತರುತ್ತಿರುವುದು ಔಚಿತ್ಯಪೂರ್ಣವಾಗಿದೆ. ಚಿತ್ರಯಾತ್ರೆಯು ನಾಡಿನಾದ್ಯಂತ ಸಂಚರಿಸುವಾಗ ಎಲ್ಲಾ ಪುಸ್ತಕಗಳು ನಾಡಿನ ಮೂಲೆ ಮೂಲೆಗೂ ತಲುಪಬೇಕೆಂಬುದು ನಮ್ಮ ಉದ್ದೇಶವಾಗಿದೆ. ಈ ಮಾಲಿಕೆಯಲ್ಲಿ ಬರೆದಿರುವ ಲೇಖಕರೆಲ್ಲರೂ ಸಂಬಂಧಪಟ್ಟ ವಿಷಯದಲ್ಲಿ ಪರಿಣತರೇ ಆಗಿದ್ದಾರೆ. ನಮಗೆ ಅತ್ಯಂತ ಕಡಿಮೆ ಅವಧಿಯಲ್ಲಿ ಈ ಕಿರುಹೊತ್ತಿಗೆಗಳನ್ನು ಬರೆದುಕೊಟ್ಟ ಕಲಾ ಲೇಖಕರಿಗೆ ಆಭಾರಿಯಾಗಿದ್ದೇವೆ. ನಮ್ಮ ಈ ಪ್ರಯತ್ನವನ್ನು ಕಲಾವಿದರೂ, ಕಲಾಸಕ್ತರೂ ತುಂಬು ಹೃದಯದಿಂದ ಸ್ವಾಗತಿಸಿ ಪ್ರೋತ್ಸಾಹಿಸುತ್ತಾರೆಂದು ನಂಬಿದ್ದೇವೆ.

**ಸಿ. ಚಂದ್ರಶೇಖರ**
ಅಧ್ಯಕ್ಷರು

# ಶಿಲ್ಪಕಲೆ

ಶಿಲ್ಪಕಲೆ ಎಂದು, ಎಲ್ಲಿ ಮತ್ತು ಯಾರಿಂದ ಪ್ರಾರಂಭವಾಯಿತು? ಎಂದರೆ- ಎಂದು ಮನುಷ್ಯ, ಘನಾಕೃತಿಯಿರುವ ಕಲ್ಲು, ಮಣ್ಣು, ಮರದಂತಹ ವಸ್ತುವನ್ನು ಕೈಯಲ್ಲಿ ಹಿಡಿದು, ಅದರಲ್ಲಿ ತನ್ನದೇ ಆದ ರೂಪಾಕೃತಿ ಕಾಣುತ್ತಾ, ಮುಟ್ಟಿ ಸವರುತ್ತಾ, ತೀಡುತ್ತಾ ತನ್ನದೇ ಆದ ರೂಪಕೊಟ್ಟು, ಸಂತೋಷ ಪಡೆಯುವುದಕ್ಕೆ ಪ್ರಾರಂಭಿಸಿದನೋ ಅಂದಿನಿಂದಲೇ ಶಿಲ್ಪಕಲೆ ಪ್ರಾರಂಭವಾಯಿತು ಎನ್ನಬಹುದು.

ಶಿಲ್ಪಕಲೆಯ ಬೆಳವಣಿಗೆಯ ಹಂತಗಳನ್ನು ಸ್ಥೂಲವಾಗಿ ಮೂರು ಭಾಗಗಳನ್ನಾಗಿ ಮಾಡಬಹುದು. ಇತಿಹಾಸ ಪೂರ್ವದ ಶಿಲ್ಪಕಲೆ, ಇತಿಹಾಸ ಕಾಲದ ಶಿಲ್ಪಕಲೆ ಮತ್ತು ಆಧುನಿಕ ಕಾಲದ ಶಿಲ್ಪಕಲೆ.

ಮಾನವ ಶಿಲ್ಪಗಳನ್ನು ರಚಿಸಿ, ಆನಂದ ಪಡೆಯುವುದಕ್ಕೆ ಪ್ರಾರಂಭಿಸಿದ ಮೊದಲ ಉದಾಹರಣೆಗಳು ಕ್ರಿ.ಪೂ. ಸುಮಾರು 35,000 ವರ್ಷಗಳ ಹಿಂದಿನ ಹಳೆ ಶಿಲಾಯುಗದ ಕಾಲದಿಂದಲೇ ಕಾಣುತ್ತೇವೆ. ಕಲ್ಲು, ಮಣ್ಣು, ಮರ, ದಂತ, ಇತ್ಯಾದಿ ಪದಾರ್ಥಗಳನ್ನು ಶಿಲ್ಪರಚನೆಗೆ ಮಾಧ್ಯಮಗಳನ್ನಾಗಿ ಬಳಸಿಕೊಂಡಿದ್ದಾನೆ. ಮರ, ಮಣ್ಣಿನಲ್ಲಿ ಮಾಡಿದ ಶಿಲ್ಪಗಳು ಕಾಲಕ್ಕೆ ಸಿಕ್ಕು ಕೊಳತು, ಕರಗಿಹೋಗಿವೆ. ಮಣ್ಣಿನಲ್ಲಿ ಶಿಲ್ಪಗಳನ್ನು ರಚಿಸಿ, ಸುಟ್ಟುಗಟ್ಟಿ (ಸುಡಾವೆ ಶಿಲ್ಪಗಳನ್ನು) ಮಾಡುವುದು ಮನುಷ್ಯ ತಡವಾಗಿ ಅರಿತುಕೊಂಡ ಕ್ರಮವಾಗಿರಬಹುದು.

ಹಳೆ ಶಿಲಾಯುಗದ ಶಿಲ್ಪಿಗೆ ಕಾಡಿದ ವಿಷಯಗಳೆಂದರೆ, ತನ್ನ ಹುಟ್ಟು ಮತ್ತು ಆಹಾರ. ಈ ಕಾರಣದಿಂದಲೇ ಶಿಲ್ಪಗಳಲ್ಲಿ ಮಾತೃದೇವತೆ (ಹೆಣ್ಣಿನ ಆಕೃತಿ) ಮತ್ತು ಪಶುಪ್ರಾಣಿಗಳು ಮೊದಲು ಕಾಣಿಸಿಕೊಂಡಿದ್ದು.

ಹೆಣ್ಣಿನ ಶಿಲ್ಪವನ್ನು ರಚಿಸುವಾಗ ಅಂದಿನ ಶಿಲ್ಪಿ ಎದೆ, ಸೊಂಟ, ಜನನಾಂಗ ಭಾಗಗಳಿಗೆ ಹೆಚ್ಚು ಒತ್ತುಕೊಟ್ಟಿದ್ದಾನೆ ಇಲ್ಲವೆ ಅತಿಶಯದಿಂದ ತೋರಿದ್ದಾನೆ. ಹೆಣ್ಣನ್ನು ಅಂದು ಕುತೂಹಲಕಾರಿಯಾಗಿಯೂ, ಕಾಮದ ವಾಸನೆಯುಳ್ಳವಾಗಿಯೂ, ಸಂತಾನಾಭಿವೃದ್ಧಿ ಸಂಕೇತವಾಗಿಯೂ ಬಳಸಿಕೊಂಡಿರಬಹುದು. ಅಂತಹ ಶಿಲ್ಪಗಳಲ್ಲಿ ತಾಯ್ತನದ ಅಂಶಗಳನ್ನೇ

ಹೆಚ್ಚಿಗೆ ಕಾಣುತ್ತಿರುವುದರಿಂದ, ಇಂದು ನಾವು ಮಾತೃದೇವತೆಗಳೆಂದು ಚೊಕ್ಕವಾದ ಹೆಸರನ್ನು ಕೊಟ್ಟಿದ್ದೇವೆ. ಮಾತೃದೇವತೆ ಶಿಲ್ಪಗಳಲ್ಲಿ, 'ವಿಲ್ಲನ್‌ಡೊರ್ಫ್‌ನ ವೀನಸ್' ಅತ್ಯಂತ ಹೆಸರು ಮಾಡಿರುವ ಹಳೆ ಶಿಲಾಯುಗದ ಕೃತಿ. 25,000 ವರ್ಷಗಳಷ್ಟು ಹಳೆಯದಾದ ಈ ಕೃತಿ ಕಲ್ಲಿನಲ್ಲಿದ್ದು, ನಾಲ್ಕುವರೆ ಇಂಚಿನಷ್ಟು ಎತ್ತರದ್ದು. ಈಗ ಯುರೋಪಿನ ವಿಯೆನ್ನಾ ಮ್ಯೂಸಿಯಂನಲ್ಲಿದೆ.

ಫ್ರಾನ್ಸ್‌ನ ಮ್ಯೂಸಿಯಂನಲ್ಲಿರುವ ಕಾಡುಕೋಣದ ಶಿಲ್ಪ, ಕುದುರೆಯಾಕಾರದ ಶಿಲ್ಪಗಳ ಮೇಲೆ ಬಾಣದ ಗುರುತುಗಳನ್ನು ಕಾಣುತ್ತೇವೆ. ಹಳೆ ಶಿಲಾಯುಗದ ಮನುಷ್ಯ, ನಾಳಿನ ತನ್ನ ಆಹಾರವನ್ನು ಮೊದಲು ವಶೀಕರಣ ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸಿದ ಹಂತವನ್ನು ಇವುಗಳಲ್ಲಿ ಕಾಣುತ್ತೇವೆ.

ಹಳೆ ಶಿಲಾಯುಗದ ಹೆಚ್ಚಿನ ಶಿಲ್ಪಗಳು, ನದಿ ದಡದ ಗುಹೆಗಳ ತಾವಿನಲ್ಲಿಯೇ ಸಿಕ್ಕಂತಹವು. ಈ ಶಿಲ್ಪಗಳು ಹೆಚ್ಚು ನೈಜವಾಗಿಯೂ, ಸ್ಫೂರ್ತಿಯುತವಾಗಿಯೂ, ಸತ್ವಸೂಚಿಯಾಗಿಯೂ ಇದ್ದು, ಕೈ ಹಿಡಿತಕ್ಕೆ ಸಿಗುವಂತಹ ಅಳತೆಯವು.

ಫ್ರಾನ್ಸ್‌ನ ಮಗ್ದಲೀನ್ ಗುಹೆಯೊಂದರಲ್ಲಿ, ಕಾಲು ಅಗಲಿಸಿ ಗೋಡೆಗೆ ಒರಗಿ ಕುಳಿತಿರುವಂತೆ ಹೆಣ್ಣಿನ ನಗ್ನ ಉಬ್ಬು ಶಿಲ್ಪವೊಂದಿದೆ. ಮಾನವಳತೆಯ ಈ ಉಬ್ಬು ಶಿಲ್ಪ ಕ್ರಿ.ಪೂ. ಸುಮಾರು 15,000ರದ್ದು. ಇದು ನಿಜವಾಗಿ, ನಿಸರ್ಗದಲ್ಲಿ ತಾನು ತಾನಾಗಿಯೇ ರೂಪುಗೊಂಡ ಆಕೃತಿ. ನೈಸರ್ಗಿಕವಾಗಿ ರೂಪುಗೊಂಡಿರುವ ಆಕಾರಕ್ಕೆ ಅಂದಿನ ಶಿಲ್ಪಿ, ತನ್ನ ಭಾವನೆ, ಕಲ್ಪನೆಯನ್ನು ಸೇರಿಸಿ ನಗ್ನತೆಯನ್ನು ಇನ್ನಷ್ಟು ಸ್ಪಷ್ಟಗೊಳಿಸಿರುವಂತೆ ಕಾಣುತ್ತದೆ.

ಇಂದಿಗೂ ಇದೇ ತರಹ ನಿಸರ್ಗದಲ್ಲಿ ಎಷ್ಟೊ ಘನ ರೂಪಾಕಾರಗಳನ್ನು ನೋಡುತ್ತೇವೆ. ನಮಗಿಷ್ಟವಾದ ರೂಪಾಕಾರ ಕಂಡು ಖುಷಿಪಡುತ್ತೇವೆ, ನಮಗಿಷ್ಟವಾದ ರೂಪಾಕಾರಗಳನ್ನು ತಿದ್ದಿ ತೀಡಿ ಪೂರ್ಣಗೊಳಿಸಿ ಆನಂದ ಪಡೆಯುತ್ತೇವೆಯಲ್ಲವೆ? ಇದೇ ಸೃಜನಶೀಲ ಶಿಲ್ಪಕಲೆಯ ಮೊದಲ ಹಂತ ಎನ್ನಬಹುದಲ್ಲವೆ!

ಮುಂದೆ ಮುಂದೆ ಮನುಷ್ಯನ ಬುದ್ಧಿ, ವಿಚಾರ, ಕಲ್ಪನೆ ಬೆಳೆಯುತ್ತಾ ಉದ್ದೇಶ ಪೂರ್ವಕವಾಗಿ ಶಿಲ್ಪಗಳನ್ನು ರಚಿಸುವುದಕ್ಕೆ ಪ್ರಾರಂಭಿಸಿದ. ಸತ್ತ ಪೂರ್ವಜರ ಪೂಜೆಗಾಗಿ, ನೆನಪಿಗಾಗಿ, ಧಾರ್ಮಿಕ ಆಚರಣೆಗಾಗಿ, ಸಸ್ಯ ಸಂಪತ್ತು ಹೆಚ್ಚಿಸುವುದಕ್ಕಾಗಿ, ಸಂತಾನಾಭಿವೃದ್ಧಿಗಾಗಿ, ನಿಸರ್ಗದ ಶಕ್ತಿಯನ್ನು ಉಪಶಮನಗೊಳಿಸುವುದಕ್ಕಾಗಿ, ಆ ಶಕ್ತಿಯನ್ನು ತನ್ನ ಕಲ್ಪನಾ ರೂಪಕ್ಕಿಳಿಸಿ, ಮೂರ್ತವಾದ ರೂಪಕೊಟ್ಟು, ಗುಡಿಗಳಲ್ಲಿಟ್ಟು ಪೂಜಿಸತೊಡಗಿದ್ದು ಇನ್ನೊಂದು ಹಂತ.

ಭಾರತದ ಶಿಲ್ಪಕಲಾ ಇತಿಹಾಸದಲ್ಲಿ ಹಳೆ ಶಿಲಾಯುಗದ ಕಾಲದ್ದಾಗಲಿ, ಹೊಸ ಶಿಲಾಯುಗದ ಕಾಲದ್ದಾಗಲಿ ಸ್ಪಷ್ಟ ಉದಾಹರಣೆಗಳು ಸಿಕ್ಕಿಲ್ಲ. ಭಾರತೀಯ ಶಿಲ್ಪಕಲಾ ಇತಿಹಾಸ, ಶಿಲ್ಪ ಸ್ಪಷ್ಟವಾಗಿ ರೂಪುಗೊಂಡು ಸಂಪೂರ್ಣತೆಯ ಹಂತ ತಲುಪಿದ ಮೆಟ್ಟಿಲಿನಿಂದಲೇ ಪ್ರಾರಂಭವಾಗುತ್ತದೆ. ಭಾರತೀಯ ಶಿಲ್ಪಕಲಾ ಬೆಳವಣಿಗೆಯಲ್ಲಿ, ಅಭ್ಯಾಸದಲ್ಲಿ, ದೇವರು ದೇವಾಲಯಗಳದೇ ಪ್ರಮುಖ ಪಾತ್ರ. ನಮ್ಮಲ್ಲಿ ಕಲ್ಲಿನಲ್ಲಿ ಕೊರೆದು ರಚಿಸಿದ ಗುಹಾದೇವಾಲಯಗಳು ಇವೆ. ಕಲ್ಲಮೇಲೆ ಕಲ್ಲನಿಟ್ಟು ಕಟ್ಟಿದ ದೇವಾಲಯಗಳು ಇವೆ. ಈ ಎರಡು ಪ್ರಕಾರದ ವಾಸ್ತು ನಿರ್ಮಾಣದಲ್ಲಿ ಉಬ್ಬುಗೆತ್ತನೆಯ ಶಿಲ್ಪಗಳೇ ಹೆಚ್ಚು.

ನಮ್ಮ ಸಂಸ್ಕೃತಿಯಲ್ಲಿ ಅನೇಕ ಮತ ಧರ್ಮಗಳಿವೆ. ಎಲ್ಲ ಮತ ಧರ್ಮದವರು ದೇವಾಲಯಗಳನ್ನು ಕಟ್ಟಿಸಿದ್ದಾರೆ, ಶಿಲ್ಪಗಳನ್ನು ಕೆತ್ತಿಸಿದ್ದಾರೆ, ಕೊರೆಸಿದ್ದಾರೆ ಮತ್ತು ಚಿತ್ರಿಸಿದ್ದಾರೆ. ಭಾರತೀಯ ಶಿಲ್ಪಕಲೆಯನ್ನು, ಶಿಲ್ಪದಲ್ಲಿರುವ ಆಕಾರ, ರೂಪ ಮಾತ್ರ ನೋಡಿ ಆನಂದಿಸುವಂತಿಲ್ಲ. ಈ ಕಾರಣದಿಂದ ಬ್ರಾಹ್ಮಣ, ಜೈನ, ಶೈವ, ಬೌದ್ಧ ಇತ್ಯಾದಿ ಧರ್ಮಗಳಲ್ಲಿರುವ ಸಿದ್ಧಾಂತ, ಪುರಾಣ ಪುಣ್ಯಕತೆಗಳ ಜ್ಞಾನ ಅಗತ್ಯವೆನಿಸುತ್ತದೆ. ಅಲ್ಲದೆ ನಾಟ್ಯ ಶಾಸ್ತ್ರಕ್ಕೆ ಸಂಬಂಧಿಸಿದ ಅಂಗಾಭಿನಯ, ಹಸ್ತಾಭಿನಯ, ಭಂಗಿ ಇವುಗಳ ತಿಳುವಳಿಕೆ ಕೂಡ ಕೊಂಚ ಅಗತ್ಯವಾಗುತ್ತದೆ.

ಭಾರತೀಯ ಶಿಲ್ಪಕಲೆಯ ಬೆಳವಣಿಗೆಯನ್ನು ಮುಂದಿನಂತೆ ಕಾಲ, ಪ್ರಾಂತ, ಶೈಲಿಗೆ ಅನುಗುಣವಾಗಿ ಗಮನಿಸಬಹುದು.

## ಶಿಲ್ಪಿಯ ಆಶಯ

ಪಂಚೇಂದ್ರಿಯಗಳಲ್ಲೊಂದಾದ ಕಣ್ಣಿನಿಂದ ಗ್ರಹಿಸಿ ಆನಂದ ಪಡೆಯುವಂತಹ ಕೃತಿಗಳನ್ನು 'ದೃಶ್ಯಕಲೆ'ಗಳೆಂದು ಕರೆಯುತ್ತೇವೆ. ಚಿತ್ರಕಲೆ ಮತ್ತು ಶಿಲ್ಪಕಲೆ ದೃಶ್ಯಕಲೆಯ ಎರಡು ಪ್ರಮುಖ ಅಂಗಗಳು. ಚಿತ್ರಕ್ಕೆ ಉದ್ದ ಮತ್ತು ಅಗಲವೆಂಬ ಎರಡು ಮಾನಗಳಿದ್ದು, ಚಿತ್ರ; ಕಾಗದ, ಕ್ಯಾನ್‌ವಾಸ್, ಗೋಡೆಯಂತಹ ದ್ವಿಪಾತಳಿಯನ್ನು ಅವಲಂಬಿಸಿದೆ. ಶಿಲ್ಪಕ್ಕೆ ಉದ್ದ, ಅಗಲ ಮತ್ತು ದಪ್ಪ ಎಂಬ ಮೂರು ಮಾನಗಳಿರುತ್ತವೆ. ಶಿಲ್ಪ ಎಂದರೆ, ಕಲ್ಲು, ಮಣ್ಣು, ಮರ, ರಬ್ಬರ್, ಪ್ಲಾಸ್ಟಿಕ್, ಸಿಮೆಂಟ್‌ನಂತಹ ತ್ರಿಮಾನಾಕೃತಿ ಪಡೆಯುವ ಯಾವುದೇ ಪದಾರ್ಥದಲ್ಲಿ ತಯಾರಿಸಿದ ಒಂದು ಕೃತಿ. ಅಂದರೆ ಮುಟ್ಟಿ ಅನುಭವಿಸಬಹುದಾದಂತಹ, ಸ್ಪರ್ಶಾನುಭವವಿರು(Tactile quality)ವಂತಹ ಪದಾರ್ಥಗಳನ್ನು ಬಳಸಿ, ಕೃತಿರಚನಾ ಕ್ರಮದಲ್ಲಿ ಕೆತ್ತಣೆಕೆ, ಮೆತ್ತಣೆಕೆ(Carving and Modeling)ಯ ಕ್ರಿಯಾ ಅಂಶಗಳನ್ನೂ ಕಾಣುತ್ತೇವೆಯೊ ಅದನ್ನ ಸಹ ಶಿಲ್ಪ ಕೃತಿ ಎನ್ನುತ್ತೇವೆ. ಶಿಲ್ಪಕೃತಿಯನ್ನು ತ್ರಿಮಾನ ಕಲೆ (Three dimensional Art) ಮತ್ತು ಪ್ಲಾಸ್ಟಿಕ್ ಆರ್ಟ್ (Plastic Art) ಎಂದು ಕೂಡ ಹೇಳುತ್ತೇವೆ.

ಶಿಲ್ಪ ಮತ್ತು ಶಿಲ್ಪಕಲೆಯ ಹರವು, ಆಧುನಿಕ ಯಾ ನವ್ಯ ಶಿಲ್ಪಕಲೆಯ ಅಧ್ಯಾಯದಲ್ಲಿ ಇನ್ನೂ ಸ್ಪಷ್ಟವಾಗವುದನ್ನು, ಸಂಕೀರ್ಣವಾಗುವುದನ್ನು ನೋಡಬಹುದು.

ಭಾರತೀಯ ವಿಶಾಲ ಅರ್ಥದಲ್ಲಿ ಶಿಲ್ಪಿಯೆಂದರೆ ವಿಶ್ವಕರ್ಮಿ. ವಿಶ್ವಕರ್ಮಿ ಚಿತ್ರಕಲಾವಿದನೂ ಹೌದು, ಶಿಲ್ಪ ಕಲಾವಿದನೂ ಹೌದು. ಶಿಲ್ಪಿ ವಾಸ್ತುಗಾರ (Architect) ಮತ್ತು ಒಳಾಂಗಣ ಅಲಂಕಾರಿಕನೂ (Interior decorator) ಸರಿ. ಇಂದಿನ ದಿನಗಳಲ್ಲಿ ಪ್ರತಿ ವಿಷಯದಲ್ಲಿ ವಿಶೇಷ ಅಭ್ಯಾಸ ಮತ್ತು ಶಿಸ್ತು ಬೆಳೆಯತೊಡಗಿರುವುದರಿಂದ, ದ್ವಿಮಾನ ಪಾತಳಿಯನ್ನುಪಯೋಗಿಸಿಕೊಂಡು ಚಿತ್ರ ಬರೆಯುವವನನ್ನು ಚಿತ್ರಕಾರ(Painter) ನೆಂದೂ ಮತ್ತು ತ್ರಿಮಾನಾಕೃತಿ ನೀಡುವ ವಸ್ತುಗಳನ್ನು ಬಳಸಿಕೊಂಡು ರೂಪಾಕಾರ ನೀಡುವ ವ್ಯಕ್ತಿಯನ್ನು 'ಶಿಲ್ಪಿ' (Sculptor) ಎಂದೂ ಕರೆಯುತ್ತೇವೆ.

ಶೈಲಿಯು ಶಿಲ್ಪಿಯ ಉಳಿಯ ನಡೆಯನ್ನು ಸೂಚಿಸುತ್ತದೆ. ಕಲಾ ಇತಿಹಾಸದ ಅಭ್ಯಾಸದಲ್ಲಿ ಶೈಲಿ ಪ್ರಮುಖ ಪಾತ್ರವಹಿಸುತ್ತದೆ. ಶೈಲಿಯಲ್ಲಿ ಶಿಲ್ಪಕಲಾವಿದನ ಆಂತರಿಕ ಭಾವಾವೇಶ ಮತ್ತು ಆ ಕಾಲದ, ಆ ಪ್ರಾಂತದ ಪ್ರವೃತ್ತಿ(Trend)ಯನ್ನು ಸಹ ಗುರ್ತಿಸಬಹುದು. ಉದಾಹರಣೆಗಾಗಿ ಹೊಯ್ಸಳ ಶಿಲ್ಪಕಲೆ. ಹೊಯ್ಸಳ ಶಿಲ್ಪಕಲೆ ಅತಿ ಅಲಂಕಾರಿಕವಾಗಲು, ಶಿಲ್ಪಿಗೆ ಸಿಕ್ಕ ಮೆದುವಾದ ಕಲ್ಲು ಮಾತ್ರ ಕಾರಣವಲ್ಲ, ಅಲ್ಲಿಯ ಶಿಲ್ಪಿಗೆ ಆಂತರಿಕವಾಗಿ ಯಾವ ಭಾವಾವೇಶವನ್ನು ತೋರಿಸುವ ಆಸೆ ಇಲ್ಲ. ಬದಲಿಗೆ ಶಿಲ್ಪಿಯ ಕಸಬುಗಾರಿಕೆಯೇ ಎದ್ದು ಕಾಣುತ್ತದೆ. ಅಲ್ಲದೆ ಆ ಪ್ರಾಂತದ, ಆ ಕಾಲದ ಸಾಹಿತ್ಯ ನೋಡಿದಾಗಲೂ ಕೂಡ ಅಲಂಕಾರಿಕ ಪ್ರವೃತ್ತಿ ಸ್ಪಷ್ಟವಾಗುತ್ತದೆ.

ನಮ್ಮ ರಾಜರುಗಳು ತಾವು ಗೆದ್ದ ಯುದ್ಧದ ವಿಜಯೋತ್ಸಾಹವನ್ನು ಮೆರೆಯುವುದಕ್ಕೂ, ತಮ್ಮ ಆರಾಧ್ಯ ದೇವತೆಯ ಭಕ್ತಿಗೂ ದೇವಾಲಯಗಳನ್ನು ಕಟ್ಟಿಸಿದ್ದಾರೆ, ಕೆತ್ತಿಸಿದ್ದಾರೆ. ರಾಜನಿಗೆ ಇಷ್ಟವಾದ ಶೈಲಿಯ ಆಚಾರ್ಯ ಶಿಲ್ಪಿಯನ್ನು ಅವನ ಶಿಷ್ಯರೂ ಮುಂದುವರಿಸಿದ್ದಾರೆ. ರಾಜನ ಮಗನು ಸಹ ತಂದೆಯ ರುಚಿಯನ್ನೇ ಮುಂದುವರಿಸಿದ್ದಾನೆ. ಹೀಗಾಗಿ ಒಬ್ಬ ವ್ಯಕ್ತಿಯ ಶೈಲಿ ಆ ಮನೆತನದ, ಆ ಪ್ರಾಂತದ ಶೈಲಿಯಾಗಿ ಪರಿಣಮಿಸಿದೆ. ಸೂಕ್ಷ್ಮವಾಗಿ ಅಭ್ಯಾಸ ಮಾಡಿದಲ್ಲಿ ಶಿಲ್ಪಿಯಿಂದ ಶಿಲ್ಪಿಗೆ ಉಳಿಯ ನಡೆಯಲ್ಲಿ ಇರುವ ವ್ಯತ್ಯಾಸ ಕಾಣಬಹುದು.

ಶೈಲಿಯನ್ನು, ಕಾಲದ ಶೈಲಿ, ಪ್ರಾಂತದಶೈಲಿ, ಗುಂಪಿನ ಶೈಲಿ ಮತ್ತು ವೈಯಕ್ತಿಕ ಶೈಲಿಯಾಗಿ ವಿಂಗಡಿಸಿ ಅಭ್ಯಸಿಸಬಹುದಾಗಿದೆ. ಒಂದು ಪ್ರಾಂತದ ಪೂರ್ವಜರಿಂದ, ತಲತಲಾಂತರವಾಗಿ ಬೆಳೆದು ಬಂದ ಕಸಬುಗಾರಿಕೆಯ ಶೈಲಿಯನ್ನು ಸಾಂಪ್ರದಾಯಿಕ ಶೈಲಿ (Traditional style) ಎನ್ನುತ್ತೇವೆ. ಇಂತಹ ಶೈಲಿಗೆ ಲಿಖಿತರೂಪದ ತತ್ವಗಳಿರುವುದು ಕಡಿಮೆ. ರೂಢಿಗತವಾಗಿ ಬೆಳೆದು ಬಂದ ಶೈಲಿಯಿಂದ ಭಿನ್ನವಾಗಿರುವಂತಹ ಶೈಲಿಯನ್ನೇ ಆಧುನಿಕ ಶೈಲಿಯನ್ನುತ್ತೇವೆ. ಆಧುನಿಕ ಶೈಲಿಯಲ್ಲಿ ವೈಯಕ್ತಿಕ ಶೈಲಿಯೇ ಪ್ರಾಧಾನ್ಯ.

## ಶಿಲ್ಪ ನಿರ್ಮಾಣ

ಶಿಲ್ಪ ರಚಿಸುವ ಬಗೆಯನ್ನು ಸ್ಥೂಲವಾಗಿ ಎರಡು ಬಗೆಗಳನ್ನಾಗಿ ಮಾಡಬಹುದು. ಕೆತ್ತನೆ (Carving) ಮತ್ತು ರೂಪಣೆ (Modelling) ಕಲ್ಲು, ಮರದಂತಹ ವಸ್ತುಗಳಲ್ಲಿ, ಅದರಲ್ಲಡಗಿರುವ ರೂಪವನ್ನು ಕೆತ್ತುತ್ತಾ, ಬಿಡಿಸುತ್ತಾ ಹೋಗುವ ಈ ವಿಧಾನವನ್ನು ಕೆತ್ತನೆ (Carving) ಅಥವಾ 'ಸಬ್‌ಸ್ಟ್ರ್ಯಾಕ್ಷನ್ ಮೆಥೆಡ್' (Substraction Method) ಎನ್ನುವರು.

ಮಣ್ಣು, ಮೇಣದಂತಹ ಪದಾರ್ಥಗಳನ್ನು ಉಪಯೋಗಿ, ಮೆತ್ತುತ್ತಾ ಆಕಾರ, ಗಾತ್ರವನ್ನು ನೀಡುವ ಬಗೆಯನ್ನು ರೂಪಣೆ ಅಥವಾ 'ಅಡಿಷನ್ ಮೆಥೆಡ್' (Addition Method) ಎನ್ನುವರು

ಕಲಾವಿದ, ಒಂದು ಶಿಲ್ಪವನ್ನು ರಚಿಸಲು ಉಪಯೋಗಿಸಿದ ಪದಾರ್ಥ, ವಸ್ತು ಮತ್ತು ಧಾತುವನ್ನು 'ಮಾಧ್ಯಮ'(Medium)ವೆಂದು ಕರೆಯುತ್ತೇವೆ. ಕಲ್ಲಿನಲ್ಲಿ ಶಿಲ್ಪ ಅರಳಿದ್ದರೆ, ಕಲ್ಲು ಆ ಶಿಲ್ಪದ ಮಾದ್ಯಮ, ಒಂದು ಶಿಲ್ಪದ ತಯಾರಿಕೆಯಲ್ಲಿ ವಿವಿಧ ಪದಾರ್ಥಗಳನ್ನು, ಮಾಧ್ಯಮಗಳನ್ನು ಅಳವಡಿಸಿಕೊಂಡಿದ್ದರೆ. ಅದನ್ನು 'ಮಿಶ್ರ ಮಾಧ್ಯಮ' (Mixed Media) ವೆಂದು ಹೇಳುತ್ತೇವೆ.

**ಕರಡು:** ಕಲಾವಿದ ಒಂದು ಶಿಲ್ಪವನ್ನು ತಯಾರಿಸುವುದಕ್ಕಿಂತ ಮುಂಚೆ, ಆ ಶಿಲ್ಪದ ರೂಪರೇಷೆ ಮತ್ತು ಮಾಧ್ಯಮದ ಇತಿಮಿತಿಗಳನ್ನೂ ಗಮನದಲ್ಲಿರಿಸಿಕೊಂಡು, ಚಿಕ್ಕದಾಗಿ ರೂಪಿಸಿಟ್ಟುಕೊಂಡ (reference) ಚಿಕ್ಕ ಮಾದರಿಕೃತಿ ಅಥವಾ ಕರಡು ಕೃತಿ. ಈ ಕರಡು ಕೃತಿಗಳನ್ನು 'ಮ್ಯಾಕೆಟ್' (Maquette) ಎನ್ನುವುದು.

**ಹಂದರ:** ಮಣ್ಣು, ಪ್ಲಾಸ್ಟರ್, ಸಿಮೆಂಟ್‌ನಂತಹ ಮಾಧ್ಯಮಗಳನ್ನು ಬಳಸಿ ಕೃತಿ ರಚಿಸುವಾಗ, ವಸ್ತು ಕಡಿದು ಕುಸಿದು ಬೀಳುವುದು. ಕುಸಿದು ಬೀಳುವುದನ್ನು ತಡೆಗಟ್ಟುವುದಕ್ಕಾಗಿ, ಕಬ್ಬಿಣದ ಸಲಾಕೆ, ನಾರು, ಬಟ್ಟೆ, ಕಟ್ಟಿಗೆಯಂತಹ ಪದಾರ್ಥಗಳನ್ನು ಬಳಸಿ, ಶಿಲ್ಪಕೃತಿಯ ಒಳಹಂದರ (Skeleton) ಅಥವಾ ಅಸ್ತಿಪಂಜರವನ್ನು ರಚಿಸುತ್ತಾನೆ. ಈ ಅಸ್ತಿಪಂಜರವನ್ನೆ 'ಆರ್ಮೆಚರ್' ಎನ್ನುತ್ತೇವೆ. ಶಿಲ್ಪಕೃತಿಯ ಪ್ರಥಮ ಹಂತ ಆರ್ಮೆಚರ್. ಶಿಲ್ಪದ ಸಮತೋಲನ ಮತ್ತು ಬಿಗುವು ಅಲ್ಲದೆ ಮುಂದೆ ಉಂಟಾಗಬಹುದಾದ ಆಕಾರ ಈ ಆರ್ಮೇಚರನ್ನೇ ಅವಲಂಬಿಸಿದೆ.

**ಮೈವಳಿಕೆ:** ಶಿಲ್ಪಕೃತಿಯ ಮೇಲ್ಮೈ, ನುಣುಪಾಗಿಯೂ, ತರಿತರಿಯಾಗಿಯೂ ಇರಬಹುದು. ಈ ರೀತಿಯ ಶಿಲ್ಪದ ಮೇಲ್ಮೈ ಗುಣತ್ವವನ್ನು ಮೈವಳಿಕೆ ಅಥವಾ ಟೆಕ್ಸ್ಚರ್ (Texture) ಎಂದು ಕರೆಯುತ್ತೇವೆ.

ಮೈವಳಿಕೆಯನ್ನು ಶಿಲ್ಪದಲ್ಲಿ ಬೆಳಕು ನೆರಳಿನ ಹೊಯ್ದಾಟವನ್ನು ಮತ್ತು ಶಿಲ್ಪದಲ್ಲಿ ಗಟ್ಟಿತನ, ಭಾರತ್ವವನ್ನು ಮೂಡಿಸುವುದಕ್ಕೂ ಬಳಸಲಾಗುತ್ತದೆ. ಕೆಲವೊಮ್ಮೆ ಕಲಾವಿದ, ತನ್ನ ಉಳಿಯ ಪೆಟ್ಟಿನ ಗುರುತುಗಳನ್ನೂ, ಮೆತ್ತಿದ ರೀತಿಯನ್ನು ಹಾಗೆಯೇ ಉಳಿಸಿಕೊಳ್ಳುವುದುಂಟು. ಅಲ್ಲಿ ಕಲಾವಿದ ತನ್ನ ಉಳಿ ಜಾರಿಸಿದ ರೀತಿ, ಮೆತ್ತಿದ ರಭಸವನ್ನು ಹೇಳುತ್ತಿರುತ್ತಾನೆ. ಇದು ಕಲಾವಿದನ ದೈಹಿಕ ಚಲನದ ಭಾವಾವೇಶವನ್ನು ಮಾತ್ರವಲ್ಲದೆ, ಶಿಲ್ಪಕೃತಿ ರೂಪುಗೊಳ್ಳುವ ಹಂತದಲ್ಲಿ ಕಲಾವಿದ ಅನುಭವಿಸಿದ ವಿಶೇಷ ಅನುಭವವೂ ಮನನವಾಗುತ್ತದೆ.

**ಬಣ್ಣ:** ಶಿಲ್ಪಗಳಿಗೆ ಬಣ್ಣ ಸವರುವುದು ಹೊಸದೇನಲ್ಲ. ಕ್ರಿ.ಪೂ.ಸು. 3000ದ ಸಮಯದಲ್ಲಿಯೇ ಈಜಿಪ್ತನವರು ಶಿಲ್ಪಗಳಿಗೆ ಬಣ್ಣ ಹಚ್ಚಿದ್ದಾರೆ. ಗಂಡು ಶಿಲ್ಪಕ್ಕೆ ಕಂದು (Dark red) ಬಣ್ಣವನ್ನು, ಹೆಣ್ಣು ಶಿಲ್ಪಕ್ಕೆ ತಿಳಿಗುಲಾಬಿ ಬಣ್ಣವನ್ನು ಹಚ್ಚಿದ್ದಾರೆ.

ಕಲ್ಲಿನ ಕೃತಿಗಳಿಗೆ ವ್ಯಾಕ್ಸ್‌ಪಾಲಿಶ್ ಮಾಡುವುದರಿಂದ ಅದರ ರೂಪಾಕಾರಕ್ಕೆ ಹೆಚ್ಚು ಒತ್ತು ಸಿಗುವುದು. ಮರದ ಕೃತಿಗಳಿಗೆ ವ್ಯಾಕ್ಸ್ ಹಚ್ಚುವುದರಿಂದ, ಮರದಲ್ಲಿರುವ ಕಣಗಳು (Grains) ಹೆಚ್ಚು ಸ್ಪುಟಗೊಳ್ಳುವವು. ಲೋಹದ ಶಿಲ್ಪಗಳಿಗೆ ಪೆಟಿನಾವನ್ನು ಮಾಡುವುದರಿಂದ, ಧಾತುವಿನಲ್ಲಿರುವ ಪ್ರತಿಬಿಂಬಿಸುವ ಗುಣವನ್ನು ಹಿಡಿತಕ್ಕೆ ತರಬಹುದು. ಅಲ್ಲದೆ ಹಳೆಯತನದ ಪರಿಣಾಮ ನೀಡಬಹುದು.

ಶಿಲ್ಪ ರಚಿಸುವುದಕ್ಕೆ ಬಳಸಿದ ಮಾಧ್ಯಮ ತುಕ್ಕುಹಿಡಿಯದಂತೆ, ಹುಳು ಹತ್ತದಂತೆ ನೋಡಿಕೊಳ್ಳಲು ಸಹ, ಸಂರಕ್ಷಣಾ ಕ್ರಮವಾಗಿಯೂ ಬಣ್ಣ ಹಚ್ಚಲಾಗುವುದು. ಬಣ್ಣವನ್ನು, ಆಕಾರ ರೂಪಗಳ ಸ್ಪಷ್ಟತೆಗೂ, ಮೈವಳಿಕೆಯ ಅಂದಕ್ಕೂ, ಸಂರಕ್ಷಣಾ ಕಾರ್ಯಕ್ಕೂ ಮಿಗಿಲಾಗಿ ಅಭಿವ್ಯಕ್ತಿಯ ಒತ್ತಡಕ್ಕಾಗಿಯೂ ಬಳಸುವುದು ಕಂಡುಬರುತ್ತದೆ.

**ಪೀಠ:** ಪೀಠ, ಶಿಲ್ಪಕೃತಿಯನ್ನು ಗಟ್ಟಿಯಾಗಿ ಹಿಡಿದು ನಿಲ್ಲಿಸುವ ಕಾರ್ಯ ನಿರ್ವಹಿಸುತ್ತದೆ ಅಲ್ಲದೆ ಶಿಲ್ಪಕೃತಿಗೆ ವಿಶೇಷವಾದ ಸ್ಥಾನ, ವೇದಿಕೆ(platform)ಯನ್ನು ನಿರ್ಮಿಸಿಕೊಡುತ್ತದೆ.

ಪೀಠ (Pedastal) ಎಲ್ಲಾ ಶಿಲ್ಪಗಳಿಗೆ ಅನಿವಾರ್ಯವೆಂದೇನಲ್ಲ. ಪೀಠ ಶಿಲ್ಪದ ಅಂಗಭಾಗವೂ ಅಲ್ಲ. ಪೀಠವನ್ನು ಹೆಚ್ಚಾಗಿ ಚಿಕ್ಕ ಪ್ರಮಾಣದ ಶಿಲ್ಪಗಳಿಗೆ ಬಳಸಲಾಗುತ್ತದೆ. ಶಿಲ್ಪವನ್ನು ನೋಡುಗನ ದೃಷ್ಟಿಸಮಕ್ಕೆ ನಿಲ್ಲಿಸುವುದಕ್ಕಾಗಿಯೇ ಪೀಠ ಹೆಚ್ಚು ಬಳಸಲಾಗುತ್ತದೆ.

**ಮಾನವಳತೆ** (Life size) : ಲೈಫ್‌ಸೈಜ್ ಎನ್ನುವ ಪದ ಅಳತೆಯ ಮಾನವನ್ನು ಸೂಚಿಸುತ್ತದೆ. ಒಂದು ಕೃತಿ ಲೈಫ್‌ಸೈಜಿನಲ್ಲಿದೆಯೆಂದರೆ; ಶಿಲ್ಪ, ನಿಜವಾದ ವ್ಯಕ್ತಿ/ಪ್ರಾಣಿ/ವಸ್ತುವಿನಷ್ಟೆ ಉದ್ದಗಲ, ದಪ್ಪಕ್ಕೆ ಸಮಾನವಾಗಿದೆ ಇಲ್ಲವೆ ಹತ್ತಿರವಾಗಿದೆ ಎಂದು ನೀಡುವ ಅಂದಾಜು ಅಳತೆ ಅಥವಾ ಮಾನ.

**ಸಾಚಾ ಮತ್ತು ಎರಕ:** (Moulding and Casting) ಸಾಚಾ ತೆಗೆಯುವುದರಲ್ಲಿ ಎರಡು ವಿಧ. ವೇಸ್ಟ್ ಮೌಲ್ಡ್ ಸಾಚಾದಲ್ಲಿ, ಕಲಾಕೃತಿಯ ಒಂದೇ ಒಂದು ಪ್ರತಿಕೃತಿ ಪಡೆಯುವುದಕ್ಕೆ ಸಾಧ್ಯವಿದೆ. ಇಲ್ಲಿ ಪ್ರತಿಕೃತಿಯನ್ನು ಪಡೆಯುವಾಗ ಸಾಚಾವನ್ನು ಒಡೆದು ತೆಗೆಯಲಾಗುವುದು. ಪೀಸ್‌ಮೌಲ್ಡ್ ಸಾಚಾದಲ್ಲಿ, ಸಾಚಾ ಎರಡು ಮೂರು ಭಾಗಗಳಾಗಿರುತ್ತದೆ. ಇಂತಹ ಸಾಚಾಗಳಲ್ಲಿ ಅನೇಕ ಪ್ರತಿಕೃತಿಗಳನ್ನು ತೆಗೆಯಲು ಸಾಧ್ಯವಿದೆ. ಸಾಚಾಗಳನ್ನು ಮಾಡಲು ಪ್ಲಾಸ್ಟರ್ ಆಫ್ ಪ್ಯಾರಿಸ್, ರಬ್ಬರ್, ಮಣ್ಣನ್ನು ಸಹ ಉಪಯೋಗಿಸಬಹುದು.

ಸಾಚಾಗಳಲ್ಲಿ ಕಾಯಿಸಿದ ಲೋಹವನ್ನು ಎರಕಹೊಯ್ದು ಎರಕದ ಶಿಲ್ಪಗಳನ್ನು ತಯಾರಿಸುತ್ತಾರೆ. ಎರಕ ಹೊಯ್ಯುವ ಕೊಳವೆಯನ್ನು ರನ್ನರ್ ಎಂದೂ, ಸಾಚಾದಲ್ಲಿನ ಬಿಸಿಗಾಳಿ ಹೊರಬರುವುದಕ್ಕಿರುವ ಕೊಳವೆಯನ್ನು ರೆಸರ್ ಎಂದು ಹೇಳುವರು.

ಸಾಚಾಗಳಲ್ಲಿ, ಲಾಸ್ಟ್ ವಾಕ್ಸ್ (Last wax) ಪದ್ಧತಿಯಲ್ಲಿ ಲೋಹದ ಶಿಲ್ಪಗಳನ್ನು ಎರಕಹೊಯ್ದು ಶಿಲ್ಪ ತಯಾರಿಸುವುದು, ಆದಿಕಾಲದಿಂದಲೂ ಬಂದಿದ್ದರೂ, ಇಂದಿಗೂ ಚಾಲ್ತಿಯಲ್ಲಿರುವ ಪದ್ಧತಿ. ವಾಕ್ಸ್‌ನ ಕೃತಿಗೆ, ಪ್ಲಾಸ್ಟರ್ ಅಥವಾ ಮಣ್ಣನ್ನು ಲೇಪಿಸಿ, ಕಾಯಿಸಿದಾಗ, ಮೇಣ ಕರಗುವುದು. ಮೇಣ ಕರಗಿದ ಸ್ಥಳದಲ್ಲಿ ಕಾಯ್ದ ದ್ರವರೂಪದ ಲೋಹ ಹೊಯ್ದು, ಆರಿದ ನಂತರ ಸಾಚಾವನ್ನು ಒಡೆದು ಕೃತಿಯನ್ನು ಪಡೆಯಲಾಗುವುದು.

**ಸುಡಾವೆ ಶಿಲ್ಪಗಳು** (Terracotta sculptures) : ಮಣ್ಣಿನ (ಜಿಗಿಯಾದ ಆವೆಮಣ್ಣು) ಶಿಲ್ಪಗಳನ್ನು ತಯಾರಿಸಿ, ನೆರಳಲ್ಲಿ ಒಣಗಿಸಿ, ಹೆಚ್ಚಿನ ಗಟ್ಟಿ ಬಾಳಿಕೆಗಾಗಿ ಸುಡಲಾಗುವುದು. ಸುಟ್ಟುಗಟ್ಟಿಗೊಳಿಸಿದ ಮಣ್ಣಿನ ಶಿಲ್ಪಗಳನ್ನು ಸುಡಾವೆ ಶಿಲ್ಪಗಳೆಂದು ಕರೆಯುವರು.

## ಶಿಲ್ಪ ಪ್ರಕಾರಗಳು

ಶಿಲ್ಪಗಳನ್ನು ಪ್ರಮುಖವಾಗಿ ಎರಡು ಪ್ರಕಾರಗಳಲ್ಲಿ ವಿಂಗಡಿಸಬಹುದು. ದುಂಡು ಶಿಲ್ಪಗಳು (Round sculptures) ಮತ್ತು ಉಬ್ಬು ಶಿಲ್ಪಗಳು (reliefs) ಯಾವ ಶಿಲ್ಪದ ಎಲ್ಲಾ ಮೇಲ್ಮೈಗಳನ್ನು ನೋಡುವುದಕ್ಕೆ ಸಾಧ್ಯವಿದೆಯೋ, ಯಾವ ಶಿಲ್ಪದ ಎಲ್ಲಾ ತಳಗಳು ಕ್ರಿಯಾಶೀಲವಾಗಿವೆಯೊ, ಯಾವ ಶಿಲ್ಪಗಳು, ರಸಿಕನನ್ನು ತನ್ನ ಸುತ್ತಲೂ ಬಳಸಿ ನೋಡುವುದಕ್ಕೆ ಆಸ್ಪದ ನೀಡುತ್ತವೆಯೋ ಅಂತಹ ಶಿಲ್ಪಗಳನ್ನು ದುಂಡು ಶಿಲ್ಪಗಳೆನ್ನುತ್ತೇವೆ. ಯಾವ ಶಿಲ್ಪಗಳು ಭಿತ್ತಿ ಅಥವಾ ಇನ್ನೊಂದು ಪಾತಳಿಗೆ(ಸಮತಲಕ್ಕೆ) ಅಂಟಿಕೊಂಡಿವೆಯೋ, ಯಾವ ಶಿಲ್ಪಗಳು ಭಿತ್ತಿ ಅಥವಾ ಸಮತಲದಿಂದ ಉಬ್ಬಿ ಹೊರಚಾಚಿಕೊಂಡಿವೆಯೊ ಹಿಂಭಾಗ ನೋಡಲು ಸಾಧ್ಯವಿಲ್ಲವೋ ಅಂತಹ ಶಿಲ್ಪಗಳನ್ನು ಉಬ್ಬು ಶಿಲ್ಪಗಳೆಂದು ಪರಿಗಣಿಸುತ್ತೇವೆ. ವಾಸ್ತು ರಚನೆಯ ಅಂಗವಾಗಿರುವ ದೊಡ್ಡ ಉಬ್ಬು ಶಿಲ್ಪಗಳನ್ನು ವಾಸ್ತುಶಿಲ್ಪ (ಆರ್ಕಿಟೆಕ್ಟಾನಿಕ್) ಶಿಲ್ಪಗಳುಗಳೆಂದು ಕರೆಯುತ್ತೇವೆ. ಶಿಲ್ಪಗಳ ವಸ್ತು ವಿಷಯದ ಆಧಾರದ ಮೇಲೆ ಈ ಕೆಳಗಿನಂತೆ ವಿಂಗಡಿಸಬಹುದು.

**ಮೂರ್ತಿಶಿಲ್ಪಗಳು:** ಮೂರ್ತಿಶಾಸ್ತ್ರಕ್ಕೆ (Iconography) ಅನುಗುಣವಾಗಿ ತಯಾರಾದ ದೇವತಾ ವಿಗ್ರಹಗಳು, ದೇವತೆಯ ಆಯುಧಗಳು, ವಾಹನಗಳು ಪ್ರಮುಖವಾದ ಪಾತ್ರವಹಿಸುತ್ತವೆ.

**ಭಾವಶಿಲ್ಪಗಳು:** ಸಾಮಾನ್ಯವಾಗಿ ವ್ಯಕ್ತಿ ಶಿಲ್ಪಗಳನ್ನು ಸಹ ಭಾವ ಶಿಲ್ಪ ಪ್ರಕಾರಕ್ಕೆ ಸೇರಿಸಿಕೊಂಡು Portrait ಎನ್ನುವುದು ವಾಡಿಕೆಯಾಗಿದೆ. ವ್ಯಕ್ತಿಶಿಲ್ಪಗಳು ಮತ್ತು ಭಾವ ಶಿಲ್ಪಗಳೆಂದು ಬೇರೆ ಬೇರೆಯಾಗಿ ನೋಡುವುದಕ್ಕೆ ಸಾಧ್ಯವಿದೆ.

ಒಬ್ಬ ವ್ಯಕ್ತಿಯ, ದೈಹಿಕ ಮುಖ ಚರ್ಯೆಗಳಿಂದ ವ್ಯಕ್ತಿ ಇಂಥವನೇ ಎಂದು ಗುರ್ತಿಸುವುದಕ್ಕೆ ಸಾಧ್ಯವಿರುವಂತಹ ಶಿಲ್ಪಗಳನ್ನು ವ್ಯಕ್ತಿಶಿಲ್ಪಗಳೆಂದು ಪರಿಭಾವಿಸಬಹುದಾಗಿದೆ. ಉದಾಹರಣೆಗಾಗಿ ಇಂದಿನ ಗಾಂಧೀಜಿ, ಅಂಬೇಡ್ಕರ್ ಇತ್ಯಾದಿ. ಕುಶಾನರ ಕಾಲದಲ್ಲಿಯ ಕನಿಷ್ಕನ ವ್ಯಕ್ತಿಶಿಲ್ಪ ಮಥುರಾ ಮ್ಯೂಸಿಯಂನಲ್ಲಿದೆ.

ವ್ಯಕ್ತಿ ಚಿತ್ರಣ ಶಿಲ್ಪದಲ್ಲಿ, ದೈಹಿಕ ಮುಖಚರ್ಯೆಗಳಿಗಿಂತ ಭಾವವೇ ಪ್ರಮುಖವಾಗಿದ್ದಲ್ಲಿ ಭಾವಶಿಲ್ಪವಾಗುತ್ತದೆ. ಭಾವಶಿಲ್ಪದಲ್ಲಿ ಮೂಲ ವ್ಯಕ್ತಿಯ ದೈಹಿಕ ರೂಪಗಳು ಗೌಣವಾಗಿ, ಆದರ್ಶರೂಪ ಪಡೆಯುತ್ತವೆ. ಉದಾಹರಣೆಗಾಗಿ ನಮ್ಮ ಬುದ್ಧ. ಬುದ್ಧನ ಅರೆಮುಚ್ಚಿದ ಕಣ್ಣು, ಉಸಿರೆಳೆದ ಅಗಲವಾದ ಎದೆ, ಸೌಮ್ಯ ಮುಖ, ನಿಂತ ಅಥವಾ ಕುಳಿತ ಭಂಗಿ, ಬುದ್ಧನ ಆಂತರಿಕ ಭಾವವನ್ನು ಹೊರಹೊಮ್ಮುತ್ತವೆಯೇ ಹೊರತು, ಬುದ್ಧನ ವೈಯಕ್ತಿಕ ದೈಹಿಕ ರೂಪವನ್ನಲ್ಲ, ಇದಕ್ಕೆ ಶ್ರವಣಬೆಳಗೊಳದ ಬಾಹುಬಲಿಯನ್ನು ಸಹ ಉದಾಹರಿಸಬಹುದು.

ವ್ಯಕ್ತಿಯ ತಲೆ ಮತ್ತು ಎದೆ ಭಾಗ ಮಾತ್ರ ತೋರಿಸಿರುವ ಶಿಲ್ಪಗಳನ್ನು ಎದೆಮೊಗಶಿಲ್ಪ ಅಥವಾ ಬಸ್ಟ್ (Bust) ಎನ್ನುವರು.

**ಪರಿಸರ ಶಿಲ್ಪಗಳು:** ನಿರ್ಜೀವವಾದ ಆವರಣಕ್ಕೆ ಜೀವ ತುಂಬುವ ಮತ್ತು ಆ ಸ್ಥಳಾವಕಾಶಕ್ಕೆ ಚೇತನ ನೀಡಿ ಕ್ರಿಯಾಶೀಲತೆಯನ್ನು ನೀಡುವ ದೃಷ್ಟಿಯಲ್ಲಿಯೇ ಇಂತಹ ಶಿಲ್ಪಗಳು ರಚಿತವಾಗಿರುತ್ತವೆ. ಪಾರ್ಕ್ ಮತ್ತು ದೊಡ್ಡದಾದ ಆವರಣವೇ ಇವುಗಳಿಗೆ ಸೂಕ್ತವಾದ ಸ್ಥಳ. ಇಂತಹ ಶಿಲ್ಪಗಳ ರೂಪಾಕಾರ, ಸುತ್ತಲಿನ ಪರಿಸರಕ್ಕನುಗುಣವಾಗಿಯೇ ರಚನೆಯಾಗಿರುತ್ತವೆ. ಹೆಚ್ಚಿನವು ಬೃಹದಾಕಾರದ ಶಿಲ್ಪಗಳಾಗಿರುತ್ತವೆ.

ಪರಿಸರ ಶಿಲ್ಪಕ್ಕೆ ಹೊಂದಿಕೊಂಡಂತೆ ಸಮುದಾಯ ಶಿಲ್ಪಗಳದ್ದು ಮತ್ತೊಂದು ಪ್ರಕಾರ. ಜೀವನದ ದಿನ ನಿತ್ಯದ ಹಾಡು ಪಾಡು, ಈ ಶಿಲ್ಪಗಳ ವಿಷಯ. ಇವು ಒಂದು ರೀತಿಯ ವಿವಿಧ ಭಾವಗಳ ಗುಂಪು ಶಿಲ್ಪಗಳು.

**ನೈಸರ್ಗಿಕ ಶಿಲ್ಪಗಳು:** ಕೆಲವು ಕಲ್ಲು, ಮರದ ಬೊಡ್ಡೆಯಲ್ಲಿ ನೈಸರ್ಗಿಕವಾಗಿ ಭಾವ ಕೆರಳಿಸುವ ರೂಪಾಕಾರಗಳಿರುತ್ತವೆ. ಶಿಲ್ಪಿ ಅಂತಹವುಗಳನ್ನು ತಂದು, ಅವಶ್ಯವಿದ್ದಲ್ಲಿ ತಿದ್ದಿ ತೀಡಿ, ಅವುಗಳಿಗೊಂದು ಕಲಾರೂಪ ನೀಡುತ್ತಾನೆ.

ಆಧುನಿಕ ತಂತ್ರಜ್ಞಾನ ಮತ್ತು ಮಾಧ್ಯಮಗಳನ್ನು ಬಳಸಿಕೊಂಡು ಅನೇಕ ಪ್ರಕಾರದ ಶಿಲ್ಪಗಳು ಬೆಳೆಯತೊಡಗಿವೆ. ಅವುಗಳಲ್ಲಿರುವ ವಸ್ತು, ವಿಷಯ, ಭಾವ, ತಾಂತ್ರಿಕತೆ, ಶೈಲಿ, ಪಂಥಕ್ಕನುಗುಣವಾಗಿ ವರ್ಗೀಕರಿಸುತ್ತಾ ಹೋಗುವುದಕ್ಕೆ ಅವಕಾಶವಿದೆ. ಅಂತಹವುಗಳಲ್ಲಿ ತಾತ್ಕಾಲಿಕ ಶಿಲ್ಪಗಳು (Temporary Sculptures), ಜೋಡಣಾ ಶಿಲ್ಪಗಳು (Assembled Sculptures), ಪ್ರತಿಷ್ಠಾಪನಾ ಶಿಲ್ಪಗಳು(Instalations), ಹಾಸು ಶಿಲ್ಪಗಳು (Floor Sculptures), ಶಕ್ತಿ ಸಂಚಿತ ಚಲನಾತ್ಮಕ ಶಿಲ್ಪಗಳ(Kinetic Sculptures)ನ್ನು ಉದಾಹರಣೆಗೆ ತೆಗೆದುಕೊಳ್ಳಬಹುದು. ಇಂಥ ಪ್ರಯೋಗಶೀಲ ಶಿಲ್ಪಗಳನ್ನು ಹೆಚ್ಚಾಗಿ ಯುರೋಪ್ ಮತ್ತು ಅಮೇರಿಕಾಗಳಲ್ಲಿ ನೋಡುತ್ತೇವೆ. ಪ್ರಯೋಗಶೀಲತೆಯಿಂದ ಪ್ರಭಾವಿತಗೊಂಡ ನಮ್ಮ ಅನೇಕ ಶಿಲ್ಪಿಗಳೂ ಈ ಹಲವು ಪ್ರಯೋಗನಿರತರಾಗಿದ್ದಾರೆ.

## ಶಿಲ್ಪಕಲೆಗೂ ಚಿತ್ರಕಲೆಗೂ ಇರುವ ವ್ಯತ್ಯಾಸ

ಇಂದಿನ ದಿನಗಳಲ್ಲಿ ಶಿಲ್ಪಕಲೆಗೂ ಚಿತ್ರಕಲೆಗೂ ಇರುವ ವ್ಯತ್ಯಾಸ ಕೂದಲೆಳೆಯಷ್ಟು ಮಾತ್ರ. ಒಂದು ಶಿಲ್ಪಕೃತಿಯ ಮೈವಳಿಕೆ ಒರಟುತನ, ಮೃದುತ್ವ, ನುಣುಪು, ದೊರಗುತನ, ತರಿತರಿ ಕೇವಲ ದೃಷ್ಟಿಗೆ ಮಾತ್ರ ಸೀಮಿತವಾಗಿಲ್ಲ. ಶಿಲ್ಪವನ್ನು ಮುಟ್ಟಿದಾಗಲೂ ಅದೇ ತರಿತರಿ ನುಣುಪುತನ ಅನುಭವವಾಗುತ್ತದೆ. ಸ್ಪರ್ಶಾನುಭವ ಮತ್ತು ದೃಶ್ಯಾನುಭವ ಸಮಸಮವಾಗಿರುತ್ತದೆ. ಒಂದು ಶಿಲ್ಪವನ್ನು ಮುಟ್ಟಿ ಆನಂದಿಸುವುದಕ್ಕೆ ಸಾಧ್ಯವಿರುವುದರಿಂದ ಕುರುಡ ಸಹ ಶಿಲ್ಪಕೃತಿಯನ್ನು ನೋಡಿ ಸವಿಯಲು ಸಾಧ್ಯವಿದೆ.

ವರ್ಣಚಿತ್ರವನ್ನು ನಿರ್ದಿಷ್ಟವಾದ ಸ್ಥಳದಲ್ಲಿ ನಿಂತು, ಅದರಲ್ಲಿರುವ ಸ್ಥಳಾವಕಾಶ(Space), ಒಳಚಲನೆ, ದೃಗ್ಧರ್ಶನ (Perspective)ಇತ್ಯಾದಿ ಅನುಭವಿಸುತ್ತೇವೆ. ಇದು ದೃಷ್ಟಿಗೋಚರ ಮಿಥ್ಯಾನುಭವ. ಶಿಲ್ಪಕೃತಿ ಹಾಗಲ್ಲ. ಶಿಲ್ಪಕೃತಿ ನಿಜವಾದ ಅವಕಾಶವನ್ನು ಆವರಿಸಿಕೊಂಡು ಸಹೃದಯಿಯನ್ನು ತನ್ನ ಸುತ್ತಲೂ ಬರಮಾಡಿಕೊಂಡು, ವಿಶೇಷವಾದ ದೃಶ್ಯಾನುಭವ ನೀಡುತ್ತದೆ.

ಚಿತ್ರಕಲೆ ಮತ್ತು ಶಿಲ್ಪಕಲೆಯಲ್ಲಿ ರಸಿಕನ ರಸಾಸ್ವಾದನ ದೃಷ್ಟಿ ಒಂದೇ ತೆರನದಾಗಿರುತ್ತದೆ. ಚಿತ್ರಕಲಾವಿದನ ಮತ್ತು ಶಿಲ್ಪಕಲಾವಿದನ ಯೋಚನಾ ತರಂಗಗಳು ಒಂದೇ ರೀತಿಯಲ್ಲಿ ಬೆಳೆಯುತ್ತಿರುತ್ತವೆ. ಶಿಲ್ಪಿ ವಸ್ತು ವಿಷಯವನ್ನು ತ್ರಿಮಾನಾಕೃತಿಯಲ್ಲಿ ಅನುಭವಿಸಿ ತ್ರಿಮಾನಾಕೃತಿಯ ಮಾಧ್ಯಮಕ್ಕೆ ವರ್ಗಾಯಿಸುತ್ತಾನೆ. ಚಿತ್ರಕಲಾವಿದ ವಸ್ತು ವಿಷಯವನ್ನು

ತ್ರಿಮಾನಾಕೃತಿಯಲ್ಲಿ ಅನುಭವಿಸಿ, ದ್ವಿಮಾನಗಳಿಗೆ ವರ್ಗಾಯಿಸಿ, ತ್ರಿಮಾನಾಕೃತಿಯ ಅನುಭವ ನೀಡುತ್ತಾನೆ. ಇದೇ ಶಿಲ್ಪಿಗೂ, ಚಿತ್ರಕಲಾವಿದನಿಗೂ ಇರುವ ಪ್ರಮುಖ ವ್ಯತ್ಯಾಸವೆನ್ನಬಹುದು.

## ಸಿಂಧೂಕೊಳ್ಳದ ಶಿಲ್ಪಗಳು

ಸಿಂಧೂಕೊಳ್ಳದ (ಕ್ರಿ.ಪೂ.ಸು. 2500ರಿಂದ 1500) ಹರಪ್ಪಾ ಮತ್ತು ಮೊಹೆಂಜೋದಾರೊ ನಗರದ ಶಿಲ್ಪಿಗಳು ಉಬ್ಬು ಶಿಲ್ಪಗಳನ್ನು, ದುಂಡುಶಿಲ್ಪಗಳನ್ನು, ಕಲ್ಲು, ಮಣ್ಣು ಮತ್ತು ಲೋಹದಲ್ಲಿ ರಚಿಸುವುದರಲ್ಲಿ ನಿಪುಣರಾಗಿದ್ದರು.

ಒಂದು ಒಂದೂವರೆ ಅಂಗುಲ ಚೌಕದ ಬಳಪದ ಕಲ್ಲಿನ ಬಿಲ್ಲೆಗಳ ಮೇಲೆ ಹುಲಿ, ಆನೆ, ನೀರಾನೆ, ಏಕಶೃಂಗಿ, ಮೊಸಳೆ, ಜಿಂಕೆ ಇತ್ಯಾದಿ ಪ್ರಾಣಿಗಳ ಚಿತ್ರಗಳನ್ನು ಮತ್ತು ಪಶುಪತಿ ಶಿವ, ಸಪ್ತ ಮಾತೃಕೆ ದೇವತೆಗಳನ್ನು ಕೊರೆದಿದ್ದಾರೆ. ಲಘು ಉಬ್ಬುಗೆತ್ತನೆಯ ಈ ಬಿಲ್ಲೆಗಳನ್ನು ಮುದ್ರೆಗಳೆಂದು ಕರೆಯಲಾಗಿದೆ. ಈ ಮುದ್ರೆಗಳನ್ನು ಅಂದಿನ ವ್ಯಾಪಾರಿಗಳು ಸಿಕ್ಕಾ(ಮೊಹರು) ಹಾಕುವುದಕ್ಕೆ ಬಳಸುತ್ತಿರಬಹುದೆಂದು ಊಹಿಸಲಾಗಿದೆ.

ಗೂಳಿ(ನಂದಿ) ಚಿತ್ರವಿರುವ ಮುದ್ರೆಯನ್ನು ನೋಡುತ್ತಿದ್ದರೆ, ಅಂದಿನ ಶಿಲ್ಪ ಗೂಳಿಯಲ್ಲಿರುವ ಸಹಜತೆ ಮತ್ತು ಆಂತರಿಕ ಶಕ್ತಿಯನ್ನು ಹೊರಗೆಡುವುದರಲ್ಲಿ ಸಫಲವಾಗಿರುವುದು ಕಾಣುತ್ತದೆ. ಗೂಳಿಯ ಬಲಿಷ್ಠವಾದ ದೇಹ, ಎತ್ತರದ ಭುಜ, ಕೊಂಬು, ಕತ್ತಿನ ಗಂಗೆ ತೊಗಲು, ನಿಂತ ಗಂಭೀರತೆಯನ್ನು ಬಹು ನೈಜವಾಗಿ ಮೂಡಿಸಿದ್ದಾನೆ.

ಇಲ್ಲಿ ಸಿಕ್ಕಿರುವ ದುಂಡು ಶಿಲ್ಪಗಳಲ್ಲಿ ನರ್ತಕಿ, ಪೂಜಾರಿಯ ಎದೆಮೊಗ ಶಿಲ್ಪ, ಎರಡು ಮುಂಡ(Torso)ಗಳು, ಅಲ್ಲದೆ ಸುಡಾವೆ ಮಣ್ಣಿನ ಮಾತೃದೇವತೆ, ಆಟದ ಸಾಮಗ್ರಿಗಳು ಭಾರತೀಯ ಶಿಲ್ಪಕಲಾ ಇತಿಹಾಸದ ಮೊದಲ ಮೈಲಿಗಲ್ಲಾಗಿವೆ.

ಸುಮಾರು ಐದೂವರೆ ಅಂಗುಲ ಎತ್ತರವಿರುವ ಕಂಚಿನ ನರ್ತಕಿ, ಸಪೂರವಾದ ದೇಹಾಕೃತಿಯನ್ನುಳ್ಳ ನೃತ್ಯಗಾತಿ, ನಗ್ನವಾಗಿರುವ ಈ ಬಾಲಕಿಯ ಎಡಗೈ ಅಗಲವಾದ ಬಳೆಗಳಿಂದ ತುಂಬಿ ಎಡಗಾಲ ಮೇಲೆ ಆಶ್ರಿತವಾಗಿದೆ. ಬಲಗೈಯಲ್ಲಿ ರಟ್ಟೆ ಕಡಗ ಮತ್ತು ಎರಡು ಬಳೆಗಳಿದ್ದು ಕೈ ಸೊಂಟದ ಮೇಲಿದೆ. ಸಂಪೂರ್ಣ ದೇಹದ ಭಾರ ಬಲಗಾಲಿನ ಮೇಲಿದೆ. ಒಟ್ಟು ದೇಹ ದ್ವಿಭಂಗಿಯಲ್ಲಿದೆ. ಕೊರಳಲ್ಲಿ ಚಿಕ್ಕ ಪದಕ ಆದಿವಾಸಿಗಳು ಉಪಯೋಗಿಸುವ ದಾರದಂತಿದೆ. ಹಿಂದೆ ಬಾಗಿದ ತಲೆ, ಭಾರವಾಗಿ ಅರೆ ಮುಚ್ಚಿದ ಕಣ್ಣು, ಅಗಲವಾಗಿ ತೆರೆದ ಮೂಗಿನ ಹೊಳ್ಳೆ, ನಿಂತ ಭಂಗಿ ನೋಡುತ್ತಿದ್ದರೆ, ಬಾಲಕಿ ಆದೇ ತಾನೆ ಯಾವುದೋ ಧಾರ್ಮಿಕ ನೃತ್ಯ ಮುಗಿಸಿ ವಿಶ್ರಾಂತಿ ಪಡೆಯುತ್ತಿದ್ದಂತೆ ಕಾಣುತ್ತದೆ. ಹತ್ತು ಹನ್ನೆರಡು ವರ್ಷದ ಈ ಬಾಲಕಿಯ ನಗ್ನ ದೇಹವನ್ನು ನೋಡಿದರೆ, ಅದರಲ್ಲಿ ಮಾತೃದೇವತೆಯ ಯಾವ ಲಕ್ಷಣಗಳು ತೋರುವುದಿಲ್ಲ. ಅಂತೆಯೇ ಈ

ಹುಡುಗಿ ಪುಷ್ಪವತಿಯಾಗುವುದರ ಸೂಚನೆಯಿದ್ದು ಧಾರ್ಮಿಕ ನೃತ್ಯದಲ್ಲಿ ಪಾಲ್ಗೊಂಡು ಸೋತು ನಿಂತಿದ್ದಾಳೆ ಎನ್ನಬಹುದಾಗಿದೆ.

ಸುಮಾರು ನಾಲ್ಕು ಅಂಗುಲ ಎತ್ತರವಿರುವ, ಕೈಕಾಲು ಕಳೆದುಕೊಂಡಿರುವ ಎರಡು ಕಲ್ಲಿನ ಮುಂಡಗಳಲ್ಲಿ ಒಂದು ನಾಟ್ಯವಾಡುತ್ತಿರುವ ನಟರಾಜನ ಭಂಗಿಯಲ್ಲಿದೆ. ಎತ್ತಿದ ಎಡಗಾಲು, ನೆಲವೂರಬಹುದಾದ ಬಲಗಾಲು ಮತ್ತು ತಿರುಗಿದ ಎದೆ, ಸೊಂಟದಲ್ಲಿರುವ ಊರ್ಧ್ವ ಮುಖ ಲಿಂಗಕ್ಕಾಗಿ ಇರುಳ ಕುಳಿ ನಟರಾಜನ (ಶಿವ) ಕಲ್ಪನೆ ಕೊಡುತ್ತದೆ. ಇನ್ನೊಂದು ಮುಂಡ ಕಯೋತ್ಸರ್ಗ ಮುದ್ರೆಯಲ್ಲಿ ನಿಂತಿರುವ ನಗ್ನ ಜೈನ ತೀರ್ಥಂಕರನಂತಿದೆ.

ಎದೆಮೊಗದ ಪೂಜಾರಿಯ ಶಿಲ್ಪ, ಸುಮಾರು ಆರೂವರೆ ಇಂಚಿನ ಕಲ್ಲಿನ ಶಿಲ್ಪ. ಅಗಲವಾಗಿ ಹಣೆಗೆ ಕಟ್ಟಿದ ಪಟ್ಟಿ, ಬಾಚಿ ತೀಡಿದ ಗಡ್ಡ, ಮೀಸೆ ಬೋಳಿಸಿದ ಮೇಲ್ತುಟಿ, ದುಂಡಾಗಿ ತಿರುಚಿಕೊಂಡ ಕಿವಿ, ತ್ರಿದಳ ಚಿತ್ರವಿರುವ ಹೊದ್ದಶಾಲು ಸುಮೇರಿಯನ್ ನಾಗರಿಕತೆಯ ಶಿಲ್ಪಲಕ್ಷಣಗಳನ್ನು ಹೋಲುತ್ತದೆ. ಮೂಗಿನ ಮೇಲೆ ಕೇಂದ್ರೀಕೃತವಾಗಿರುವ ದೃಷ್ಟಿ, ಅರೆ ಮುಚ್ಚಿದ ಕಣ್ಣು, ಅಗಲವಾದ ಮೂಗು, ದಪ್ಪವಾದ ಕೆಳದುಟಿ ಸ್ಪಷ್ಟವಾಗಿ ಭಾರತೀಯ ವ್ಯಕ್ತಿತ್ವವನ್ನು ತೋರುತ್ತವೆ.

ಸುಡಾವೆ ಮಣ್ಣಿನ ಕೃತಿಗಳಲ್ಲಿ ಮಾತೃದೇವತೆಯ ಗೊಂಬೆ ಮತ್ತು ಆಟದ ಸಾಮಗ್ರಿಗಳು ಬಹು ಅನನ್ಯವಾಗಿವೆ. ಆಟಕ್ಕಾಗಿ ಮಾಡಿದ ಎತ್ತು, ಕೋಣ ಶಿಲ್ಪಗಳಿಗೆ ಗಾಲಿಯಿದ್ದು, ಕತ್ತು ತೂಗಾಡುವಂತೆ ವ್ಯವಸ್ಥೆ ಮಾಡಿದ್ದು ಅವುಗಳಿಗೆ ಜೀವ ಕಳೆ ಇದೆ.

ಸಿಂಧೂ ಸಂಸ್ಕೃತಿಯ ಶಿಲ್ಪಗಳನ್ನು ಒಟ್ಟಾರೆಯಾಗಿ ನೋಡಿದಾಗ, ಅಂದಿನ ಶಿಲ್ಪಿಗಳು, ಜೀವ ಸಂಕುಲ ದೇಹದ ಮಾಂಸ ಖಂಡಗಳ ರೂಪಗಾರಿಕೆಗೆ ಹೆಚ್ಚಿನ ಪ್ರಾಧಾನ್ಯತೆ ನೀಡುತ್ತಾ, ಸಹಜತೆ ಮತ್ತು ನೈಜತೆಗೂ ಒತ್ತು ಕೊಟ್ಟಿದ್ದಾರೆ. ನೃತ್ಯಬಾಲಕಿ ಮತ್ತು ಪೂಜಾರಿಯ ಶಿಲ್ಪಗಳಲ್ಲಿ ದ್ರಾವಿಡ ದೇಹದ ಸೊಬಗು ಮತ್ತು ಭಾರತೀಯ ತಾತ್ವಿಕ(ಯೋಗ) ಲಕ್ಷಣಗಳು ಸ್ಪಷ್ಟವಾಗುತ್ತವೆ. ಹೀಗೆ ಅವಲೋಕಿಸುತ್ತಾ ಹೋದರೆ, ಭಾರತೀಯ ಶಿಲ್ಪಕಲಾ ಪರಂಪರೆಯ ಮೊದಲ ಹಂತ ಪ್ರಬುದ್ಧವಾಗಿಯೂ ಮತ್ತು ಸೃಜನ ಶೀಲ ಕ್ರಿಯೆಯ ಪರಾಕಾಷ್ಠೆ(ತುತ್ತತುದಿ)ಯ ಹಂತದಿಂದಲೇ ಪ್ರಾರಂಭವಾಗಿದೆಯೆಂದರೆ ತಪ್ಪಾಗದು.

## ಮೌರ್ಯ, ಶುಂಗ ಮತ್ತು ಸಾತವಾಹನರ ಕಾಲ

(ಕ್ರಿ. ಪೂ. ಸು. 2ನೇ ಶತಮಾನದಿಂದ ಕ್ರಿ.ಶ. 2ನೇ ಶತಮಾನ)

ಆರ್ಯರ ವೈದಿಕ ಧರ್ಮದಲ್ಲಿಯ ನ್ಯೂನತೆಗಳನ್ನು ಎದುರಿಸುವ ದೃಷ್ಟಿಯಲ್ಲಿ ಬೌದ್ಧ ಮತ್ತು ಜೈನ ಧರ್ಮಗಳು ಹುಟ್ಟಿಕೊಂಡವು. ಬೌದ್ಧ ಧರ್ಮದಲ್ಲಿ ಹೀನಯಾನ ಮತ್ತು ಮಹಾಯಾನವೆಂದು ಎರಡು ಪ್ರಮುಖ ಪಂಥಗಳು. ಹೀನಯಾನ ಪಂಥದಲ್ಲಿ

ಬುದ್ಧನನ್ನು ಸ್ತೂಪ, ಭೋಧಿವೃಕ್ಷ, ವೃಷಭ, ಕುದುರೆ, ಛತ್ರ ಇತ್ಯಾದಿ ಸಾಂಕೇತಿಕ ರೂಪದಲ್ಲಿ ಪೂಜಿಸಿದರೆ, ಮಹಾಯಾನದಲ್ಲಿ ಬುದ್ಧನನ್ನು ಸರಳ ಮಾನವರೂಪದಲ್ಲಿ ಕಂಡು, ಮಹಾಪುರುಷ ಲಕ್ಷಣಗಳನ್ನು ಕೊಟ್ಟು, ದೇವತಾ ರೂಪದಲ್ಲಿ ಪೂಜಿಸಲಾಗಿದೆ.

ಅಶೋಕ ಚಕ್ರವರ್ತಿ ಬೌದ್ಧ ಧರ್ಮವನ್ನು ಸ್ವೀಕಾರ ಮಾಡಿ ರಾಜಾಶ್ರಯವನ್ನು ನೀಡಿದ. ಬೌದ್ಧ ಧರ್ಮದ ಪ್ರಚಾರಕ್ಕಾಗಿ ಬುದ್ಧನ ಸಾಂಕೇತಿಕ ಶಿಲ್ಪಗಳನ್ನು ಕೆತ್ತಿಸಿದ. ಅಶೋಕ ಚಕ್ರವರ್ತಿ ಕಾಲದ ಶಿಲಾಶಾಸನ ಸ್ತಂಭಗಳು ಶಿಲ್ಪಕಲಾ ದೃಷ್ಟಿಯಿಂದ ಹೆಚ್ಚು ಪ್ರಾಮುಖ್ಯವಾದವು. ಸುಮಾರು ನಲವತ್ತು ಅಡಿ ಎತ್ತರವಿರುವ ದುಂಡನೆಯ ಶಿಲಾಸ್ತಂಭಗಳ ಮೇಲೆ, ಸಿಂಹ, ವೃಷಭ(ಗೂಳಿ), ಚಕ್ರಗಳನ್ನು ಕಾಣುತ್ತೇವೆ. ಶಿರೋಭಾಗದಲ್ಲಿರುವ ಈ ಶಿಲ್ಪಗಳನ್ನು 'ಕ್ಯಾಪಿಟಲ್ ಫಿಗರ್' ಎನ್ನುವರು. ಇಂತಹ ಕ್ಯಾಪಿಟಲ್ ಫಿಗರ್‌ಗಳಲ್ಲಿ ಸಾರನಾಥ, ತೌರಿಯನಂದಗಢ ಮತ್ತು ರಾಮಪುರದ ಶಿಲ್ಪಗಳು ಪ್ರಮುಖ್ಯವಾದವು.

ಸಾರನಾಥ ಕ್ಯಾಪಿಟಲ್ ಫಿಗರ್ ಸುಮಾರು ಏಳು ಅಡಿ ಎತ್ತರವಿದೆ. ಈ ಕ್ಯಾಪಿಟಲ್ ಫಿಗರ್ ನವ ಭಾರತ ಸರಕಾರದ ಲಾಂಛನವಾಗಿ ಸ್ವೀಕರಿಸಲಾಗಿದೆ. ನಾಲ್ಕು ಸಿಂಹಗಳುಳ್ಳ ಚಿತ್ರವಿರುವ ಇದರ ಬಗ್ಗೆ ಕಿಸೆಯಲ್ಲಿನ ಒಂದು ನಾಣ್ಯ ತೆಗೆದು ನೋಡಿದರೆ ವಿಷಯ ಇನ್ನೂ ಸ್ಪಷ್ಟವಾಗುತ್ತದೆ. ನಾಲ್ಕು ದಿಕ್ಕಿಗೆ ಮುಖ ಮಾಡಿ ಕುಳಿತಿರುವ ಸಿಂಹಗಳ ಮೇಲೆ ಮೊದಲು ಬೌದ್ಧ ಧರ್ಮ ಚಕ್ರವಿತ್ತು(ಈಗಿಲ್ಲ), ಕೆಳ ವೃತ್ತಾಕಾರದ ಪಟ್ಟಿಯಲ್ಲಿ ಆನೆ, ಕುದುರೆ, ಗೂಳಿ ಮತ್ತು ಸಿಂಹಗಳಿವೆಯಲ್ಲವೆ? ಆನೆ; ಬುದ್ಧ ಬಿಳಿಯಾನೆ ರೂಪದಲ್ಲಿ ಮಾಯಾದೇವಿಯ ಗರ್ಭವನ್ನು ಸೇರಿದ್ದು ಸೂಚಿಸುತ್ತದೆ. ಅದರಂತೆ ಕುದುರೆ; ಬುದ್ಧ ರಾಜ್ಯ ಪರಿತ್ಯಾಗ ಮಾಡಿದ್ದನ್ನು, ಗೂಳಿ; ಬುದ್ಧ ವೃಷಭ ಲಗ್ನದಲ್ಲಿ ಜನಿಸಿದ್ದನ್ನು, ಸಿಂಹ; ಬುದ್ಧನನ್ನು ಧಾರ್ಮಿಕ ಗುರುಗಳಲ್ಲಿಯೇ ಪ್ರಧಾನನೆಂದು ಸೂಚಿಸುತ್ತವೆ. ಚಕ್ರ; ಸೂರ್ಯಸಂಕೇತವಾಗಿಯೂ, ಧರ್ಮ ಚಕ್ರಸಂಕೇತವಾಗಿಯೂ ಇದೆ. ಸಾರನಾಥದ ಈ ಕ್ಯಾಪಿಟಲ್ ಫಿಗರ್, ಬುದ್ಧನ ಜೀವನದ ನಾಲ್ಕು ಪ್ರಮುಖ ಹಂತಗಳನ್ನು ಮತ್ತು ಅವನ ಸಾಧನೆಯನ್ನು ಹರಳುಗಟ್ಟಿಸಿ ಹೇಳುವ ಒಂದು ಎತ್ತರದ ಬಯಲುಶಿಲ್ಪ (open air sculpture) ವಾಗಿತ್ತು. ಪ್ರಸ್ತುತ ಸಾರನಾಥ ಮ್ಯೂಸಿಯಂನಲ್ಲಿದೆ.

ಲೌರಿಯಾನಂದಗಢ(Lauriyanandagarh)ನಲ್ಲಿರುವ ಶಿಲಾಸ್ತಂಭದ ಕ್ಯಾಪಿಟಲ್ ಫಿಗರ್‌ನಲ್ಲಿ ಒಂದೇ ಒಂದು ಸಿಂಹ ಕುಳಿತು ಗರ್ಜಿಸುತ್ತಿದೆ. ರಾಮ್‌ಪುರದ (ಕಲ್ಕತ್ತಾ ಮ್ಯೂಸಿಯಂ) ಕ್ಯಾಪಿಟಲ್ ಫಿಗರ್, ಶಾಂತವಾಗಿ, ಗಂಭೀರವಾಗಿ ನಿಂತ ಗೂಳಿ.

ಮೌರ್ಯರ ಕಾಲದ ಶಿಲ್ಪಗಳಲ್ಲಿ ಯಕ್ಷ, ಯಕ್ಷಿಯರಿದ್ದಾರೆ. ಈ ಯಕ್ಷ ಯಕ್ಷಿಯರನ್ನು ಸಂತಾನಾಭಿವೃದ್ಧಿಯ ಸಂಕೇತಗಳೆಂದು ಭಾವಿಸಲಾಗಿದೆ. ಪ್ರಪಂಚದಲ್ಲಿಯೇ ಅತ್ಯಂತ ಹೆಸರು ಮಾಡಿರುವ, ದಿದಾರ್‌ಗಂಜ್‌ನಲ್ಲಿ ಸಿಕ್ಕಿರುವ ದಿದಾರ್‌ಗಂಜ್ ಯಕ್ಷಿ ಈಗ



ವಿಲ್ಲೆಂಡಾರ್ಫಿನ ವೀನಸ್



ಅಮರಾವತಿ



ಎಲಿಫೆಂಟಾ ಗುಹೆ



ಸೋಮನಾಥ ಹೋರೆ



ವಿ. ಎ. ದೇಶಪಾಂಡೆ



ಮಹಾಬಲಿಪುರಂ



ಚೋಳರ ಶಿಲ್ಪ



ಮಥುರಾ

ದೆಹಲಿಯ ರಾಷ್ಟ್ರೀಯ ಮ್ಯೂಸಿಯಂನಲ್ಲಿದ್ದಾಳೆ. ಲೈಫ್‌ಸೈಜ್‌ನಲ್ಲಿರುವ ದಿದಾರ್‌ಗಂಜ್ ಯಕ್ಷಿಯ ತುಂಬಿದ ಎದೆ, ಸಣ್ಣ ಸೊಂಟ, ಅಗಲವಾದ ನಿತಂಬ, ಕಿಬ್ಬೊಟ್ಟೆಯ ಏರಿಳಿತ, ಹೊಕ್ಕುಳ ಕೆಳಕ್ಕೆ ಉಟ್ಟ ಸೀರೆ ನೋಡಿದರೆ, ಸುಂದರವಾದ ಮೈಕಟ್ಟಿನ ಹೆಣ್ಣು ಹೇಗಿರಬೇಕೋ ಹಾಗಿದೆ. ಬಲಗೈಯಲ್ಲಿರುವ ಗಾಳಿ ಬೀಸುವ ಚೌರಿಯಿಂದಾಗಿ ಚಾಮರಧಾರಣಿ ಎನ್ನುವುದುಂಟು. ಕಲ್ಲಿನಲ್ಲಿರುವ ಈ ಶಿಲ್ಪ ಎಷ್ಟು ನುಣುಪಾಗಿದೆಯೆಂದರೆ ಮೇಣದಲ್ಲಿ ಎರಕ ಹೊಯ್ದಂತಿದೆ. ಇದರಿಂದಾಗಿ ಶಿಲ್ಪ, ಮಾಂಸ ಖಂಡಗಳಿಂದ ತುಂಬಿದ ಮೃದುವಾದ ಸ್ಪರ್ಶಾನುಭವ ನೀಡುವ ಗುಣಹೊಂದಿದೆ.

ಲೈಫ್‌ಸೈಜ್‌ಗಿಂತ ಎತ್ತರವಿರುವ ಪಾಟ್ನಾ ಯಕ್ಷ ಮತ್ತು ಪಾರ್‌ಖಾಮ್ ಯಕ್ಷಗಳು ಮೌರ್ಯರಾಜಾಶ್ರಯದ ಶಿಲ್ಪಗಳಿಗಿಂತ ಸ್ವಲ್ಪ ಭಿನ್ನರೀತಿಯವು. ಪಾರ್‌ಖಾಮ್ ಯಕ್ಷನ ದೊಡ್ಡ ಹೊಟ್ಟೆಯನ್ನು ನೋಡಿ ಕುಬೇರ ಯಕ್ಷನೆಂದು ಗುರುತಿಸಲಾಗಿದೆ.

ಮೌರ್ಯಕಾಲದ ಹೆಚ್ಚಿನ ಶಿಲ್ಪಗಳು ಬೃಹದಾಕಾರದವು, ನುಣ್ಣನೆಯ ಮೇಲ್ಮೈ ಉಳ್ಳವು, ತಾಂತ್ರಿಕವಾಗಿ ಶುದ್ಧಗೊಂಡಂತವು. ಭಾರಯುತವಾಗಿರುವ ಈ ಶಿಲ್ಪಗಳ ಪ್ರಾಣಿ ಮತ್ತು ವ್ಯಕ್ತಿ ಶಿಲ್ಪಗಳಲ್ಲಿ ನಿಸರ್ಗದ ಯಥಾವತ್ ಅನುಕರಣೆ ಕಾಣುತ್ತದೆ. ಸ್ತಂಭಗಳ ಮೇಲೆ ಪ್ರಾಣಿ ಚಿತ್ರ ತೋರುವುದು, ಪರ್ಶಿಯಾದಿಂದ ಪ್ರಭಾವಿತಗೊಂಡ ಶೈಲಿಯಾಗಿದ್ದರೂ ಸಹ ತನ್ನ ನಾಡಿನ ಸೊಗಡನ್ನು ಬಿಟ್ಟುಕೊಟ್ಟಿಲ್ಲದಿರುವುದು ಅಷ್ಟೇ ಗಮನಾರ್ಹವಾದ ಅಂಶವಾಗಿದೆ.

ಅಶೋಕನ ಬ್ರಾಹ್ಮಣ ಸೇನಾನಿ ಪುಷ್ಯಮಿತ್ರಶುಂಗನೆಂಬಾತ, ಮೌರ್ಯಮನೆತನದವರನ್ನು ಸೋಲಿಸಿ ಶುಂಗ ಅರಸೊತ್ತಿಗೆ ಪ್ರಾರಂಭಿಸಿದ. ಪುಷ್ಯಮಿತ್ರನ ಒಲವು ಹೆಚ್ಚಾಗಿ ಬ್ರಾಹ್ಮಣ ಧರ್ಮದ ಕಡೆಗಿತ್ತು. ಬ್ರಾಹ್ಮಣ(ಆರ್ಯರ) ಧರ್ಮಕ್ಕೆ ಸೇರಿದ ಉಬ್ಬು ಶಿಲ್ಪವೊಂದು ಭಾಜಾದ ವಿಹಾರವೊಂದರಲ್ಲಿ ಕಾಣುತ್ತದೆ. ರಥವನ್ನೇರಿ ಬರುತ್ತಿರುವ ಸೂರ್ಯ, ಆನೆಯನ್ನೇರಿ ಬರುತ್ತಿರುವ ಇಂದ್ರ ವಿಷಯ ಈ ಭಿತ್ತಿ ಶಿಲ್ಪದಲ್ಲಿದೆ. ಈ ಕಾಲದಲ್ಲಿ ಬೌದ್ಧ ಧರ್ಮದ ವರ್ಚಸ್ಸು ಕಡಿಮೆಯೇನಾಗಿರಲಿಲ್ಲ. ಈ ಕಾಲದಲ್ಲಿಯೇ ಭಾಜ ಮತ್ತು ಕಾರ್ಲಾಗಳಲ್ಲಿ ಬೌದ್ಧ ವಿಹಾರಗಳು ಮತ್ತು ಚೈತ್ಯಗುಹಾಲಯಗಳು ಕೆತ್ತಲ್ಪಟ್ಟವು. ವಿಹಾರವೆಂದರೆ ಬೌದ್ಧ ಸನ್ಯಾಸಿಗಳು ವಾಸಿಸುವುದಕ್ಕೆ, ದೊಡ್ಡ ಕಲ್ಲು ಬಂಡೆಯಲ್ಲಿ ಕೆತ್ತಲ್ಪಟ್ಟ ಗುಹಾಲಯಗಳು. ಇದರಲ್ಲಿ ದೊಡ್ಡ ಹಾಲ್ ಮತ್ತು ಚಿಕ್ಕ ಕೋಣೆಗಳಿರುತ್ತವೆ. ಚೈತ್ಯವೆಂದರೆ-ದೊಡ್ಡ ಕಲ್ಲು ಬಂಡೆಯಲ್ಲಿ ಕೊರೆದ ಪ್ರಾರ್ಥನಾ ಮಂದಿರ. ಇದಕ್ಕೆ ಕುದುರೆಲಾಳಾಕಾರ್ದದ ಮುಖಬಾಗಿಲು, ಗಜಪೃಷ್ಠಾಕಾರದ ಮಾಡು ಇರುತ್ತದೆಯಲ್ಲದೆ, ಒಳಗಡೆ ಎರಡು ಸಾಲುಗಂಬಗಳುಳ್ಳ ಇಕ್ಕೆಲದ ಪ್ರಾರ್ಥನಾ ಸ್ಥಳವಿರುತ್ತದೆ. ಈ ಪ್ರಾರ್ಥನಾ ಮಂದಿರದಲ್ಲಿ ಒಂದು ಸ್ತೂಪವಿರುತ್ತದೆ.

ಸ್ತೂಪಗಳನ್ನು ಕೇವಲ ಚೈತ್ಯಗಳಲ್ಲಿ ಮಾತ್ರ ಕಾಣುವುದಿಲ್ಲ. ಮೌರ್ಯ, ಶುಂಗ

ಮತ್ತು ಸಾತವಾಹನರ ಕಾಲದಲ್ಲಿ, ಹೊರ ಆವರಣದಲ್ಲಿ ದೊಡ್ಡ ದೊಡ್ಡ ಸ್ತೂಪಗಳನ್ನು ನಿರ್ಮಿಸಿದ್ದಾರೆ. ಅಂತಹ ಸ್ತೂಪಗಳಲ್ಲಿ ಬಾರ್ಹುತ್ ಸ್ತೂಪ, ಸಾಂಚಿಸ್ತೂಪ ಮತ್ತು ಅಮರಾವತಿಯ ಸ್ತೂಪ ಮುಖ್ಯವಾದುವು. ಚೈತ್ಯ, ವಿಹಾರ ಮತ್ತು ಸ್ತೂಪ ಬೌದ್ಧ ಮತಕ್ಕೆ ಸೇರಿದ ವಾಸ್ತು ರಚನೆಗಳಾಗಿದ್ದು ಅವುಗಳಲ್ಲಿರುವ ಉಬ್ಬುಗೆತ್ತನೆಗಳು ಶಿಲ್ಪಕಲಾ ಅಭ್ಯಾಸದಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ಸ್ತೂಪವೆಂದರೆ; ದೊಡ್ಡ ಅರ್ಧಗೋಳಾಕಾರದಲ್ಲಿ ನಿರ್ಮಿಸಿದ ದಿಮ್ಮಿ. ಇದು ಬುದ್ಧನ ಮಹಾಪರಿನಿರ್ವಾಣವನ್ನು ಸೂಚಿಸುತ್ತದೆ. ಸ್ತೂಪದಲ್ಲಿ ಛತ್ರ, ಹರ್ಮಿಕಾ ಮತ್ತು ಪೀಠಿಕೆ ಎಂಬ ಮೂರು ಭಾಗಗಳಿರುತ್ತವೆ. ಇಂತಹ ಪವಿತ್ರ ಸ್ತೂಪಗಳ ಸುತ್ತಲೂ ಮರದ ದಳಗಳನ್ನು ಅನುಕರಿಸುವ ವೃತ್ತಾಕಾರದ ಕಲ್ಲಿನ ಕಟಾಂಜನ(railing) ವಿರುತ್ತದೆ. ಕಟಾಂಜನದಲ್ಲಿ ಪ್ರವೇಶಿಸುವುದಕ್ಕೆ ಅಲಂಕಾರಿಕ ತೋರಣ ಬಾಗಿಲುಗಳಿವೆ. ಕಲ್ಲಿನ ಈ ಕಟಾಂಜನಗಳ ಮೇಲೆ, ತೋರಣದ ಬಾಗಿಲುಗಳ ಮೇಲೆ ಬುದ್ಧನ ಜೀವನ ವೃತ್ತಾಂತ ಮತ್ತು ಜಾತಕ ಕಥೆಗಳನ್ನು ಕೊರೆದಿದ್ದಾರೆ. ಹೆಬ್ಬಾಗಿಲುಗಳಲ್ಲಿ ಮತ್ತು ಕಟಾಂಜನದ ಕಂಬಗಳಲ್ಲಿ ಯಕ್ಷಯಕ್ಷಿಯರು, ವೃಕ್ಷಕನ್ಯೆಯರನ್ನು ಸಹ ಕೆತ್ತಿದ್ದಾರೆ. ಎರಡನೆ ಶತಮಾನದ ಶುಂಗರ ಬಾರ್ಹುತ್ ಸ್ತೂಪವನ್ನು ಹೀನಯಾನ ಪಂಥದ ಅರ್ಥಕೋಶವೆಂದು ಕರೆದಿದ್ದಾರೆ. ಕಾರಣ ಅಲ್ಲಿರುವ ಹೇರಳವಾದ ವಸ್ತುವಿಷಯ. ಚಪ್ಪಟೆಯಾಗಿರುವ ಈ ಉಬ್ಬು ಶಿಲ್ಪಗಳು ಹೆಚ್ಚು ರೇಖಾತ್ಮಕವಾಗಿವೆ. ರೂಪಗಳು ಬಿಡಿ ಬಿಡಿಯಾಗಿದ್ದರೂ ಸಹ ಸಮೀಪ ಮತ್ತು ದೂರತ್ವದ ದೃಶ್ಯಾಂಕನಗಳನ್ನು ತೋರುವುದರಲ್ಲಿ ಹಿಂದೆ ಬಿದ್ದಿಲ್ಲ.

'ಮಾಯಾದೇವಿಯ ಸ್ವಪ್ನ' ದೃಶ್ಯ, ಸುಮಾರು 22 ಅಂಗುಲವ್ಯಾಸವುಳ್ಳ ಸೀಲಿಂಗ್ ಮೆಡಾಲಿಯನ್‌ನಲ್ಲಿದೆ. ಮಾಯಾದೇವಿಗೆ ಬೋಧಿಸತ್ವ ಬುದ್ಧ ಆನೆಯ ರೂಪದಲ್ಲಿ ಕಾಣಿಸಿಕೊಂಡು ಗರ್ಭ ಸೇರುತ್ತಿದ್ದಾನೆ. ಮಾಯಾದೇವಿ ಮಂಚದ ಮೇಲೆ ಮಲಗಿದ್ದಾಳೆ, ಸಖಿಯರು ಕೂತು ಗಾಳಿ ಬೀಸುತ್ತಿದ್ದಾರೆ. ಪಕ್ಕದಲ್ಲಿ ಉರಿಯುತ್ತಿರುವ ದೀಪ ರಾತ್ರಿ ಸಮಯವನ್ನು ತೋರಿಸುತ್ತಿದೆ. ಮೇಲಿನಿಂದ ಮೆಲ್ಲನೆ ಆನೆಮರಿ, ಮುಂಗಾಲುಗಳನ್ನು ಮಡಚಿ, ಹಿಂಗಾಲುಗಳನ್ನು ಚಾಚಿ ಚಲಿಸಿಕೊಂಡು ಬರುತ್ತಿದೆ. ಚಿಕ್ಕ ವೃತ್ತಾಕಾರದ ಸ್ಥಳಾವಕಾಶದಲ್ಲಿ, ಕಥಾನಕಹಂದರ, ದೃಶ್ಯಾವಳಿ ಮತ್ತು ಸಂಯೋಜನಾ ತಂತ್ರ ಸುಂದರವಾಗಿ ಮೂಡಿ ಬಂದಿರುವ ಈ ಶಿಲ್ಪ ಶುಂಗರಕಾಲದ ಅತ್ಯುತ್ತಮ ಶಿಲ್ಪಗಳಲ್ಲೊಂದು ಎಂದು ಹೇಳಬಹುದು.

ಕಲಾತ್ಮಕವಾಗಿ ಸಾಂಚಿಯ ಕೆತ್ತನೆ ಬಾರ್ಹುತ್ ವರ್ಗಕ್ಕೆ ಸೇರುತ್ತದೆಯಾದರೂ ಶಿಲ್ಪಕಲೆಯ ಇನ್ನೂ ಹೆಚ್ಚಿನ ಬೆಳವಣಿಗೆಯ ಹಂತ ತೋರುತ್ತದೆ. ಸಾಂಚಿಯ ಉಬ್ಬು ಶಿಲ್ಪಗಳಲ್ಲಿ ಹೆಚ್ಚು ದುಂಡುತನ, ಅಂಗಾಂಗಗಳ ಚಲನವಲನ ಕಾಣುತ್ತೇವೆ. ಆಕಾರ

ರೂಪಗಳು ಬಿಡಿಬಿಡಿಯಾಗಿರದೆ, ಒಂದರ ಮೇಲೊಂದು ಒಂದು ಆಕಾರ ಜೋಡಿಸುತ್ತಾ ಸಂಯೋಜನಾ ಕ್ರಮವನ್ನು ಒಟ್ಟಾಗಿ ಗ್ರಹಿಸುವಂತೆ ಸ್ಥಳಾವಕಾಶದ ಕಲ್ಪನೆ ನೀಡುತ್ತವೆ.

ಸಾಂಚಿಸ್ತೂಪದ ತೋರಣದಲ್ಲಿರುವ ಸಾಲಭಂಜಿಕಾಯಕ್ಷಿ, ದುಂಡು ಶಿಲ್ಪಗಳಲ್ಲಿ ಒಂದು ಅತ್ಯುತ್ತಮ ಉದಾಹರಣೆ. ಯಕ್ಷಿ, ಮರ ಹಿಡಿದರೆ ಹೂ ಬಿಡುವ ಸಂತಾನಾಭಿವೃದ್ಧಿ ಸಂಕೇತದ ಈ ಶಿಲ್ಪ, ತ್ರಿಭಂಗಿಯಲ್ಲಿರುವ ಯಕ್ಷಿಯ ದೇಹ ವಾಸ್ತು ರಚನೆಯ ಭಾಗವನ್ನು ತೊರೆದು ಗಾಳಿಯಲ್ಲಿ ತೇಲುತ್ತಿದೆ. ಸರಳ ಮತ್ತು ಸಹಜವಾದ ಈ ಭಂಗಿ ಕಣ್ಣಿಗೆ ಹಿತ ನೀಡುತ್ತದೆ. ಸಾಂಚಿ ತೋರಣದಲ್ಲಿ ನಿಸರ್ಗ ಸಂಪತ್ತು ಅಲಂಕಾರಿಕವಾಗಿದ್ದು ಶಿಲ್ಪಿಯ ಕಲ್ಪನಾ ಲೋಕ ಮತ್ತು ಕೈಚಳಕ ಎದ್ದು ಕಾಣುತ್ತದೆ.

ಅಮರಾವತಿಯ ಶಿಲ್ಪಗಳಲ್ಲಿ ಹೆಚ್ಚು ಪ್ಲಾಸ್ಟಿಕ್ ಗುಣವನ್ನು ಕಾಣುತ್ತೇವೆ. ರೂಪಾಕಾರಗಳು ಮೆದುವಾದ ಮಾಂಸ ಖಂಡಗಳಿಂದ ತುಂಬಿಕೊಂಡಿವೆ. ಅಮರಾವತಿಯ ಸ್ತೂಪ ಶಿಲ್ಪಗಳಲ್ಲಿ ಬುದ್ಧ ಮೂರ್ತರೂಪಕ್ಕೆ ಬಂದಿದ್ದಾನೆ(ಮಹಾಯಾನ). 'ಹುಚ್ಚೆದ್ದ ಗಜವನ್ನು ನಿಗ್ರಹಿಸುತ್ತಿರುವ ಬುದ್ಧ' ಅಮರಾವತಿಯ ಶಿಲ್ಪಗಳಲ್ಲಿ ಒಂದು ಅತ್ಯುತ್ತಮ ಉದಾಹರಣೆ. ದೇವದತ್ತ ಬುದ್ಧನ ಮೇಲೆರಗಲು ಮದವೇರಿದ ಆನೆಯೊಂದನ್ನು ನಗರದಲ್ಲಿ ಕಳುಹಿಸುತ್ತಾನೆ. ರಾಜಮಾರ್ಗದಲ್ಲಿ ಜನರನ್ನು ಮನಬಂದಂತೆ ತುಳಿಯುತ್ತಾ ನಡೆದಿರುವ ಆನೆಯನ್ನು ಕಂಡು ಜನ ಹೌಹಾರಿದ್ದಾರೆ, ಕಂಗಾಲಾಗಿದ್ದಾರೆ. ಭಯಭೀತಳಾದ ನಾರಿಯೊಬ್ಬಳು ಸಾವರಿಸಿಕೊಂಡು, ಚಾಚಿಗಂಡನ್ನು ಅಪ್ಪಿಕೊಂಡಿದ್ದಾಳೆ. ಕಿಟಕಿಯಿಂದ ಜನ ಈ ಭೀಕರ ದೃಶ್ಯ ನೋಡುತ್ತಿದ್ದಾರೆ. ತಟ್ಟನೆ ಬುದ್ಧನನ್ನು ಕಂಡ ಆನೆ ಮಂಡಿಯೂರಿ, ತಲೆ ಬಾಗಿಸಿ ನಮಸ್ಕರಿಸುವ ದೃಶ್ಯ ಅನನ್ಯವಾಗಿದೆ. ಹುಚ್ಚೆದ್ದು ಜನರನ್ನು ತುಳಿಯುತ್ತಿರುವ ಆನೆ, ಅದೇ ಆನೆ ಬುದ್ಧನಿಗೆ ನಮಸ್ಕರಿಸುವ ಎರಡು ದೃಶ್ಯಗಳನ್ನು ಒಂದೇ ಚೌಕಟ್ಟಿ (frame with in the frame)ನಲ್ಲಿ ಹೇಳುವ ಅಮರಾವತಿಯ ಶಿಲ್ಪಿಯ ಜಾಣ್ಮೆ ಮೆಚ್ಚುವಂತಹದು.

ಆಂಧ್ರರ ಅಥವಾ ಸಾತವಾಹನರ ಕಾಲದ, ಕಾರ್ಲಾ ಚೈತ್ಯದ ಹೊರಗೋಡೆಯಲ್ಲಿರುವ ಮಿಥುನ ಜೋಡಿ ನೋಡುವಂಥಹದ್ದು. ತುಂಬಿದ ಹೆಣ್ಣಿನ ಅಂಗಾಂಗ, ದೃಢಕಾಯದ ವೀರ್ಯವತ್ತಾದ ಗಂಡಿನ ದೇಹ, ದುಂಡು ತನದ ವಾಸ್ತುಶಿಲ್ಪಗಳಲ್ಲಿ ಹೆಸರು ವಾಸಿಯಾಗಿದೆ. ಹೆಣ್ಣು ತನ್ನ ಕೈಯೊಂದರಿಂದ ಗಂಡಿನ ಸೊಂಟ ಬಳಸಿದರೆ, ಗಂಡಿನ ಕೈ ಹೆಣ್ಣಿನ ಭುಜದ ಮೇಲಿದೆ. ಈ ಶಿಲ್ಪದಲ್ಲಿ ಶಿಲ್ಪಿ; ಹೆಣ್ಣು ಗಂಡಿನ ಅವಯವಗಳ ಅಭ್ಯಾಸದಿಂದ, ಹೆಣ್ಣು ಗಂಡಿನಲ್ಲಿರುವ ಸಂತಾನಾಭಿವೃದ್ಧಿ ಸಂಕೇತದ ಆಂತರಿಕ ಶಕ್ತಿಯನ್ನು ಹೇಳುವುದರಲ್ಲಿ ಹೆಚ್ಚು ಒತ್ತು ಕೊಟ್ಟಿದ್ದಾನೆ. ಈ ಮಿಥುನ ಜೋಡಿಯನ್ನು ಯಕ್ಷಯಕ್ಷಿಯರೆಂದು ಭಾವಿಸಬಹುದಾಗಿದೆ.

## ಕುಶಾನ

(ಕ್ರಿ.ಶ.ಸು. 1ನೇ ಶತಮಾನದಿಂದ 3ನೇ ಶತಮಾನ)

### ಗಾಂಧಾರ ಮತ್ತು ಮಥುರಾ ಶೈಲಿ.

ಪೇಶಾವರ್ ಮತ್ತು ಮಥುರಾ ಕನಿಷ್ಕನ ಎರಡು ರಾಜಧಾನಿಗಳಾಗಿದ್ದವು. ಕುಶಾನರ ಕನಿಷ್ಕನ ಕಾಲಕ್ಕೆ ಮಹಾಯಾನ ಬೌದ್ಧ ಮತದ ಪ್ರಾರಂಭವಾಗಿತ್ತು. ಬುದ್ಧನಿಗೆ ಮೂವತ್ತೆರಡು ಮಹಾಪುರುಷ ಲಕ್ಷಣಗಳನ್ನು ನೀಡಿ, ಆದರ್ಶವಾದ ರೂಪದಲ್ಲಿ ಪೂಜಿಸುವ ಪದ್ಧತಿ, ಗಾಂಧಾರ ಮತ್ತು ಮಥುರಾ ಪ್ರದೇಶದಲ್ಲಿ ಪ್ರಾರಂಭಗೊಂಡಿತು.

ಪೇಶಾವರ್, ತಕ್ಷಶಿಲಾ, ಬಾಮಿಯಾ, ಗುಲ್ದಾರ್, ಹದ್ದಾ ಇರುವ ಈ ಪ್ರದೇಶವನ್ನು ಗಾಂಧಾರ ಪ್ರದೇಶವೆನ್ನುವರು. ಕ್ರಿ.ಪೂ. 4ನೇ ಶತಮಾನದಲ್ಲಿ ಪ್ರಾರಂಭದಲ್ಲಿ, ಅಲೆಕ್ಸಾಂಡರ್ ಈ ಪ್ರದೇಶವನ್ನು ಆಕ್ರಮಿಸಿಕೊಂಡ ಪರಿಣಾಮವಾಗಿ, ಈ ಪ್ರದೇಶದಲ್ಲಿ ಗ್ರೀಕೋ-ರೋಮನ್ ಸಂಸ್ಕೃತಿಯ ಕಲೆ ನೆಲೆಯೂರಿತ್ತು. ಗಾಂಧಾರ ಪ್ರದೇಶದಲ್ಲಿ ರಚಿತವಾದ ಬೌದ್ಧಶಿಲ್ಪಗಳಲ್ಲಿ ಗ್ರೀಕೋ-ರೋಮನ್ ಕಲೆಯ ಪ್ರಭಾವ ಎದ್ದು ಕಾಣುತ್ತದೆ. ಗ್ರೀಕೋ ರೋಮನ್(ಹೆಲನಿಕ್) ಶೈಲಿಯಲ್ಲಿರುವ ಭಾರತೀಯ ಶಿಲ್ಪಕಲೆಯನ್ನು ಗಾಂಧಾರ ಶೈಲಿಯೆನ್ನುತ್ತೇವೆ.

ಗ್ರೀಕೋ - ರೋಮನ್ ಸಂಸ್ಕೃತಿಯ ದೇವದೇವತೆಗಳು ದೃಢಕಾಯವುಳ್ಳವರು. ಆ ಸಂಸ್ಕೃತಿಯ ಶಿಲ್ಪಿಗಳು ದೇಹದ ಅಂಗಾಂಗ ರಚನೆ ಮತ್ತು ಅಂಗಸೌಷ್ಠತೆಗೆ ಹೆಚ್ಚು ಒತ್ತು ಕೊಟ್ಟಿದ್ದು ಕಾಣುತ್ತೇವೆ. ಈ ಕಾರಣದಿಂದ ಗಾಂಧಾರ ಶೈಲಿಯ ಬುದ್ಧನಲ್ಲೂ ಇದೇ ಅಂಶಗಳನ್ನು ಕಾಣುತ್ತೇವೆ.

ಗಾಂಧಾರ ಶೈಲಿಯಲ್ಲಿ ಬುದ್ಧನನ್ನು ರಚಿಸುವಾಗ ಬಾಹ್ಯ ರೂಪಣಿಕೆ ಮಾತ್ರ ಆಮದುಗೊಂಡಿದೆ. ಉಳಿದೆಲ್ಲಾ ಲಕ್ಷಣಗಳು ಭಾರತೀಯ ಬುದ್ಧ ಪ್ರತಿಮಾಲಕ್ಷಣಗಳಾಗಿವೆ. ಗಾಂಧಾರ ಶೈಲಿಯ ಬುದ್ಧನ ಸ್ವರೂಪ ಈ ಮುಂದೆ ನೀಡಿರುವಂತಿದೆ. ವ್ಯವಸ್ಥಿತವಾಗಿ ಬಾಚಿಕಟ್ಟಿದ ತರಂಗಿತ ತೆರೆತೆರೆಯಾದ ಉಷ್ಣಿಷವಿದೆ. ಕಣ್ಣಿನ ರಚನೆ; ಬಾಚಿಯಿಂದ ಒಂದೇ ಎಳೆತಕ್ಕೆ ಬಾಚಿ ತೆಗೆದಂತಿದೆ. ಹೊದ್ದ ಉತ್ತರೀಯ ರೋಮನ್ ಟೋಗಾದಂತಿದ್ದು, ಆಳವಾಗಿ, ಸ್ಪಷ್ಟವಾದ ಮಡಿಕೆಗಳಿವೆ. ಗಾಂಧಾರ ಶೈಲಿಯ ಬೋಧಿಸತ್ವನಿಗೆ ಮೀಸೆ ಸಹ ಇರುತ್ತದೆ.

ಮಥುರಾ ಶೈಲಿಯಲ್ಲಿರುವ ಬುದ್ಧನನ್ನು ನೋಡಿದರೆ, ಬುದ್ಧನ ದೇಹದಾರ್ಢ್ಯತೆ ಸ್ಪಷ್ಟ ಭಾರತೀಯನದು. ಮಾಂಸಖಂಡಗಳು ನೀಳವಾಗಿ, ಕೈಕಾಲುಗಳು (ಪೈಪ್‌ಬೆಂಡಿಂಗ್‌ನಂತಿವೆ) ಕೊಳವೆಯಂತಿವೆ. ಉಸಿರೆಳೆದ ಅಗಲವಾದ ಎದೆ, ರೇಖೆಗಳಿಂದ ಗುರ್ತಿಸುವ ತೆಳುವಾದ ಉತ್ತರೀಯವಿರುತ್ತದೆ. ತಲೆಯಲ್ಲಿ ಬಿಡಿಬಿಡಿಯಾದ ಗುಂಗುರುಕೂದಲಿನ ಸುರುಳಿಗಳು

ಕಾಣುತ್ತವೆ. ಕಣ್ಣಿನ ಮೇಲಿನ ಹುಬ್ಬು ಸ್ವಲ್ಪ ದಪ್ಪನಾಗಿ ರೇಖಾತ್ಮಕವಾಗಿದೆ. ಮಹಾಪುರುಷ ಲಕ್ಷಣದ, ಉಷ್ಣಿಷ, ಊರ್ಣ, ಉದ್ದವಾದ ಜೋಲುಕಿವಿ ಮತ್ತು ಹಸ್ತ ಮುದ್ರೆಗಳು ಹೆಚ್ಚು ಸ್ಫುಟವಾಗಿ ಕಾಣುತ್ತವೆ. ಮಥುರಾ ಶೈಲಿ ಬೇರೊಂದು ಸಂಸ್ಕೃತಿಯಿಂದ ಪ್ರಭಾವಕ್ಕೊಳಗಾಗದೆ ಬೆಳೆದ ಭಾರತೀಯ ಶಿಲ್ಪಕಲಾ ಪರಂಪರೆಯ ಮುಂದುವರಿಕೆಯ ಹಂತವೆಂದು ಹೇಳಬಹುದು.

## ಗುಪ್ತರ ಕಾಲ

(ಕ್ರಿ.ಶ. 4ನೇ ಮತ್ತು 5ನೇ ಶತಮಾನ)

ಭಾರತದ ಇತಿಹಾಸದ ಪುಟಗಳಲ್ಲಿ 'ಸುವರ್ಣಯುಗ'ವೆಂದು ಹೆಸರು ಪಡೆದಿರುವ ಗುಪ್ತಕಾಲದಲ್ಲಿ ಚಂದ್ರಗುಪ್ತ, ಸಮುದ್ರ ಗುಪ್ತ ಮತ್ತು ಎರಡನೇ ಚಂದ್ರಗುಪ್ತ ಪ್ರಮುಖ ದೊರೆಗಳು. ಈ ಕಾಲದಲ್ಲಿ ಸಾಹಿತ್ಯ ಮತ್ತು ಕಲಾತ್ಮಕ ವಿಷಯಗಳು ಹೆಚ್ಚು ಅಭಿವೃದ್ಧಿ ಹೊಂದಿದವು. ಈ ಯುಗದಲ್ಲಿ ಆರ್ಯ ಮತ್ತು ದ್ರಾವಿಡ ಸಂಸ್ಕೃತಿಗಳು ಒಟ್ಟುಕೂಡಿ ಹೊಸ ಭಾರತೀಯ ಸಂಸ್ಕೃತಿ ರೂಪುಗೊಳ್ಳುವುದಕ್ಕೆ ಪ್ರಾರಂಭವಾಯಿತು ಎನ್ನಬಹುದು. ಬೌದ್ಧ, ಬ್ರಾಹ್ಮಣ ಶೈವ ಪಂಥಕ್ಕೆ ಸಂಬಂಧಿಸಿದ ಅನೇಕ ಶಿಲ್ಪಗಳನ್ನು ಈ ಕಾಲದಲ್ಲಿ ಕಾಣುತ್ತೇವೆ. ಈ ಯುಗದಲ್ಲಿ ಭಾರತೀಯ ಶಿಲ್ಪಕಲೆ ಇನ್ನಷ್ಟು ಪರಿಷ್ಕೃತಗೊಂಡು, ದೇವ ದೇವತೆಗಳ ವಿಗ್ರಹಕಲ್ಪನೆ ಶಾಸ್ತ್ರಬದ್ಧವಾಗಿ ಬೆಳೆಯಿತು. ಮೂರ್ತಿಗಳ ಅಂಗಾಂಗ ರಚನೆಗೆ ಹೆಚ್ಚು ಗಮನವೀಯುತ್ತಾ ಲಾಲಿತ್ಯ ಪೂರ್ಣಗೊಳಿಸಿದರಲ್ಲದೆ, ಭಾವಾಭಿವ್ಯಕ್ತಿಗೂ ಸಮವಾದ ಒತ್ತು ಕೊಟ್ಟರು. ಅಂತೆಯೇ ಈ ಶೈಲಿಯನ್ನು ಭಾರತೀಯ ಮಾರ್ಗಶೈಲಿ, ಶಾಸ್ತ್ರೀಯ ಶೈಲಿ (classical style) ಎನ್ನುವುದು.

ದೆಹಲಿಯ ರಾಷ್ಟ್ರೀಯ ಮ್ಯೂಸಿಯಂನಲ್ಲಿರುವ, ಏಳುವರೆ ಅಡಿ ಎತ್ತರದ ಕೆಂಪುಮಿಶ್ರಿತ ಮರಳುಗಲ್ಲಿನ ಬುದ್ಧನನ್ನು ನೋಡಿದರೆ- ಬುದ್ಧ ಸಮಭಂಗಿಯಲ್ಲಿ ನಿಂತಿದ್ದು, ಒಡೆದು ಹೋದ ಕೈ ಅಭಯ ಮುದ್ರ ಸೂಚಿಸುವಂತಿದೆ. ಎಡಕೈಯಲ್ಲಿ ಸಂಗಾತಿ (ಹೊದ್ದ ಅರಿವೆ)ಯನ್ನು ಹಿಡಿದಿದ್ದಾನೆ. ತಲೆಯ ಹಿಂಭಾಗದಲ್ಲಿ ಅಲಂಕಾರಿಕವಾದ ಪ್ರಭಾವಳಿ ಇದೆ. ಹೊದ್ದ ಅರಿವೆ ತೆಳುವಾಗಿದ್ದು, ಮೈಗೆ ಅಂಟಿಕೊಂಡಿದೆ. ಮೈಗೆ ಅಂಟಿಕೊಂಡಿರುವ ಅರಿವೆಯಲ್ಲಿ ರೇಖಾತ್ಮಕವಾಗಿ, ಲಾಲಿತ್ಯಪೂರ್ಣವಾಗಿ ನಿರಿಗೆಗಳು ಮೂಡಿವೆ. ತೆಳುವಾದ ಬಟ್ಟೆಯಿಂದ ಬುದ್ಧನ ದೈಹಿಕ ರಚನೆಯನ್ನು ಸ್ಪಷ್ಟವಾಗಿ ಕಾಣುತ್ತವೆ. ಅರೆ ಮುಚ್ಚಿದ ಕಣ್ಣು, ಶಾಂತ ಪ್ರಸನ್ನವಾದ ಮುಖಭಾವ, ನಿಂತಭಂಗಿ, ದೈಹಿಕ ರಚನೆ, ಎಲ್ಲವೂ ಶಾಂತಭಾವವನ್ನು ಹೊರ ಚೆಲ್ಲುತ್ತಿವೆ. ನೋಡುಗನನ್ನು ಇಹಲೋಕದಿಂದ ಪಾರಮಾರ್ಥಿಕ ಲೋಕದ ಭಿತ್ತಿಪಾತಳಿಗೆ ಒಯ್ಯುವಂತಿದೆ. ಇದು ಗುಪ್ತ ಶಿಲ್ಪಗಳ ಪ್ರಮುಖ ಗುಣ.

ಮಥುರಾದಲ್ಲಿ ಬೆಳೆದ ಗುಪ್ತ ಶೈಲಿ ಇನ್ನಷ್ಟು ಪರಿಪೂರ್ಣತೆಯ ಹಂತ ತಲುಪಿದ್ದು ಸಾರನಾಥದಲ್ಲಿ. ಸಾರನಾಥದಲ್ಲಿ ಸಿಕ್ಕಿರುವ ಬುದ್ಧಗಳನ್ನು 'ಒದ್ದೆಯಾದ ಬುದ್ಧ'(Wet Buddha) ಗಳೆಂದು ಕರೆದಿದ್ದಾರೆ. ಇವು ಬುದ್ಧನನ್ನು ನೀರಿನಲ್ಲಿ ಅದ್ದಿ ತೆಗೆದಂತಿವೆ. ಮಥುರಾದ ಸರಳವಾದ ನಿರಿಗೆಗಳು ಮಾಯವಾಗಿ, ಸಂಗಾತಿ ನುಣುಪಾಗಿ ಮೆತ್ತಿಕೊಂಡಿದೆ. ದೈಹಿಕ ರೂಪಕ್ಕೆ ಹೆಚ್ಚು ಮಹತ್ವ ನೀಡಿದ್ದಾರೆ. ಸಾರನಾಥದ ಬುದ್ಧನ ಹಸ್ತದ ಬೆರಳುಗಳ ಮಧ್ಯೆ ಜಲಪೊರೆ ಕಾಣಿಸುತ್ತದೆ. ಇದು ಸಹ ಗುಪ್ತ ಶೈಲಿಯ ವಿಶಿಷ್ಟ ಗುಣಲಕ್ಷಣ.

ಗುಪ್ತರ ಕಾಲಕ್ಕೆ ಲೋಹದಿಂದ ಎರಕಹೊಯ್ದು ತಯಾರಿಸಿದ ಅನೇಕ ಲೈಫ್‌ಸೈಜ್ ಬುದ್ಧ ಪ್ರತಿಮೆಗಳು ಸುಲ್ತಾನಗಂಜ್‌ನಲ್ಲಿ ಸಿಕ್ಕಿವೆ. ಈ ಶೈಲಿಯಿಂದ ಪ್ರಭಾವಿತಗೊಂಡ ಕಾಶ್ಮೀರ ಪ್ರದೇಶದಲ್ಲೂ ಲೋಹದ ಚಿಕ್ಕ ಚಿಕ್ಕ ಬುದ್ಧ ಶಿಲ್ಪಗಳು ಕಾಣಸಿಗುತ್ತವೆ.

ಕುಶಾನರ ಕಾಲಕ್ಕಾಗಲೇ ವೈದಿಕ ಧರ್ಮದ, ಸೂರ್ಯ, ಇಂದ್ರ ಭಾಜಾದಲ್ಲಿ ಕಾಣಿಸಿಕೊಂಡಿದ್ದರೂ, ಬ್ರಾಹ್ಮಣ ವಿಷಯದ ಶಿಲ್ಪಗಳು ಸ್ಪಷ್ಟ ಬೆಳಕಿಗೆ ಬಂದದ್ದು ಗುಪ್ತರ ಕಾಲದಲ್ಲಿಯೇ. ಭೂಪಾಲದ ಹತ್ತಿರವಿರುವ ಉದಯಗಿರಿಗುಡ್ಡದಲ್ಲಿ, ಸುಮಾರು ಹನ್ನೆರಡು ಅಡಿ ಎತ್ತರದ ವರಾಹನಿದ್ದಾನೆ. ದೇವತೆಗಳು ಮತ್ತು ಅಸುರರು ಅಮೃತಕ್ಕಾಗಿ ಸಮುದ್ರ ಮಥನ ಮಾಡಿದಾಗ ಅನೇಕ ಶುಭ ವಸ್ತುಗಳು ಹೊರ ಬಿದ್ದವು. ಅದರೊಂದಿಗೆ ಭೂದೇವಿಯು ಹೊರ ಬಂದಾಗ, ಸಮುದ್ರದಲ್ಲಿದ್ದ ನಾಗರಾಜ(ಸರ್ಪ) ತಟಕ್ಕನೆ ಭೂದೇವಿಯನ್ನು ಒಳ ಎಳೆದುಕೊಂಡು ಹೋದ. ತಕ್ಷಣವೆ ವಿಷ್ಣು ವರಾಹ ಅವತಾರ ತಾಳಿ, ಸಮುದ್ರದ ಆಳದಿಂದ ಭೂದೇವಿಯನ್ನು ಶೂಲೆಗೆ ಸಿಕ್ಕಿಸಿಕೊಂಡು ಬಂದ ದೃಶ್ಯವನ್ನು ಉದಯಗಿರಿಯ ಚಿಕ್ಕ ಕಲ್ಲಿನ ಗುಹೆಯಲ್ಲಿ ಕೆತ್ತಿದ್ದಾರೆ. ನಾಟಕೀಯವಾದ ಈ ದೃಶ್ಯದಲ್ಲಿ, ಬೃಹದಾಕಾರದ ವರಾಹ, ನಾಗರಾಜನನ್ನು ಕಾಲಿನಿಂದ ಶಕ್ತಿಯುತವಾಗಿ ಮೆಟ್ಟಿನಿಂತಿದ್ದು ಸಮುದ್ರದ ಮೇಲೆ ಸಾಲಾಗಿ ನಿಂತಿರುವ ದೇವತೆಗಳು ಹರ್ಷೋದ್ಗಾರದಿಂದ ಪುಷ್ಪ ಮಳೆಗರೆಯುತ್ತಿದ್ದಾರೆ. ಶಿಲ್ಪಿಯ ಕಲ್ಪನೆ ಅಸಾಧ್ಯವಾಗಿ ಮೆರೆದಿದೆ. ಇದೆ ಗುಹೆಯ ಇನ್ನೊಂದು ಬದಿಯಲ್ಲಿ ವಿಷ್ಣು ಸಮಭಂಗಿಯಲ್ಲಿ ನಿಂತಿದ್ದು ಸೊಂಟದ ಮೇಲೆ ಕೈ ಇರಿಸಿಕೊಂಡಿದ್ದಾನೆ. ಇನ್ನೆರಡು ಕೈಯಲ್ಲಿ ಚಕ್ರಪುರುಷ ಮತ್ತು ಗಧಾಧಾರಿಯರಿದ್ದಾರೆ. ಚಕ್ರಪುರುಷ ಮತ್ತು ಗಧಾಧಾರಿಯನ್ನು ಮನುಷ್ಯರೂಪದಲ್ಲಿ ತೋರಿಸಿರುವ ಅಪೂರ್ವ ಶಿಲ್ಪವಿದು.

ಝಾನ್ಸಿಯ ಹತ್ತಿರವಿರುವ ದೇವಗಡದ ದಶಾವತಾರ ದೇವಾಲಯದಲ್ಲಿ ವಿಷ್ಣು ಅನಂತನ ಮೇಲೆ ಮಲಗಿದ್ದಾನೆ; ಲೋಕ ಸೃಷ್ಟಿಯ ಕನಸು ಕಾಣುತ್ತಿದ್ದಾನೆ. ಇದೇ ಶಿಲ್ಪದ ಮೇಲ್ಭಾಗದಲ್ಲಿ ಕಮಲದಲ್ಲಿ ಚತುರ್ಮುಖ ಬ್ರಹ್ಮ, ನವಿಲಿನ ಮೇಲೆ ಕಾರ್ತಿಕೇಯ, ಆನೆಯ ಮೇಲೆ ಇಂದ್ರ, ನಂದಿಯ ಮೇಲೆ ಶಿವ ಪಾರ್ವತಿ ಸಹ ತೇಲಿ ಬರುತ್ತಿದ್ದಾರೆ.

ಲಕ್ಷ್ಮೀ ವಿಷ್ಣುವಿನ ಕಾಲೊತ್ತುತ್ತಾ ಕಾರ್ಯಮಗ್ನಳಾಗಿದ್ದಾಳೆ. ಇದೇ ರಿಲೀಫ್‌ನ ಕೆಳಭಾಗದಲ್ಲಿ ವಿಷ್ಣುವಿನ ಆಯುಧ ಪುರುಷರ ಜೊತೆಯಲ್ಲಿ ಮಧು, ಕೈಟಭರಿದ್ದಾರೆ. ಈ ದೇವಾಲಯದಲ್ಲಿ ರಾಮಾಯಣಕ್ಕೆ ಸಂಬಂಧಪಟ್ಟ ಅನೇಕ ವಿಷಯಗಳಿವೆ.

ನದಿ ದೇವತೆಗಳಾದ ಮೊಸಳೆಯ ಮೇಲೆ ನಿಂತ ಗಂಗಾ, ಆಮೆಯ ಮೇಲೆ ನಿಂತ ಯಮುನೆ ಬೆಸಾನಗರದ ದೇವಾಲಯದ ಗರ್ಭಗೃಹದ ಮೇಲ್ಭಾಗದಲ್ಲಿ ಕಾಣುತ್ತೇವೆ.

**ಅಜಂತಾದಲ್ಲಿ:** ಅಜಂತಾ, ಶಿಲ್ಪಕಲೆಗಿಂತ ಭಿತ್ತಿಚಿತ್ರಗಳಿಗೆ ಹೆಚ್ಚು ಹೆಸರುವಾಸಿ. ಅಜಂತಾದ ಶಿಲ್ಪಕಲೆ ಕ್ರಿ.ಪೂ. ಎರಡನೆ ಶತಮಾನದಿಂದ ಏಳನೆಯ ಶತಮಾನದವರೆಗಿನದು. ಹೆಚ್ಚಿನದು ಗುಪ್ತ ಮತ್ತು ವಾಕಾಟಕ ಶೈಲಿಯದು. ಇಲ್ಲಿ ಅನೇಕ ಚೈತ್ಯ ಮತ್ತು ವಿಹಾರ ಗುಹಾಲಯಗಳಿದ್ದು, ಮೊದಲನೆಯ ಗುಹೆಯಲ್ಲಿರುವ ಧರ್ಮಚಕ್ರ ಬುದ್ಧ ಮತ್ತು ಮತ್ತೊಂದು ಗುಹೆಯಲ್ಲಿರುವ, ಮಹಾಪರಿನಿರ್ವಾಣವನ್ನು ಸೂಚಿಸುವ ಮಲಗಿರುವ ಬುದ್ಧ ಬೃಹತ್ ಪ್ರಮಾಣದವು.

## ಪಲ್ಲವ ಮತ್ತು ಚೋಳ

(7ನೇ ಶತಮಾನದಿಂದ 11ನೇ ಶತಮಾನ)

ಮದ್ರಾಸ್‌ನಿಂದ 40 ಕಿ.ಮಿ. ದೂರದಲ್ಲಿರುವ ಮಾಮಲ್ಲಪುರಂದಲ್ಲಿ ಏಕಶಿಲಾ ದೇವಾಲಯಗಳಿವೆ. ಅವುಗಳನ್ನು ರಥಗಳೆಂದು ಕರೆಯುತ್ತಾರೆ. ಅರ್ಜುನ ರಥ, ಭೀಮ ರಥ, ಧರ್ಮರಾಯನ ರಥ, ನಕುಲ ಸಹದೇವರ ರಥ ಮತ್ತು ದ್ರೌಪದಿಯ ರಥ, ಭೀಮರಥ, ಚೈತ್ಯಕಾರವಿದ್ದರೆ, ದ್ರೌಪದಿ ರಥ ಇಳಿಜಾರಿನ ಗುಡಿಸಲಿನಂತಿದೆ. ಉಳಿದೆಲ್ಲವು ದ್ರಾವಿಡ ಶೈಲಿಯ ದೇವಾಲಯಗಳಂತಿವೆ. ಈ ರಥಗಳ ಪಕ್ಕದ ಗುಡ್ಡದ ದೊಡ್ಡ ಕಲ್ಲಿನಲ್ಲಿ 'ಭಗೀರಥ ಪ್ರಯತ್ನ'ದ ವಿಷಯದ ದೊಡ್ಡ ಭಿತ್ತಿ ಶಿಲ್ಪವಿದೆ. ದೇವತೆಗಳ ಸ್ವತ್ತಾಗಿದ್ದ ಗಂಗೆಯನ್ನು ಭೂಲೋಕಕ್ಕೆ ತರಲು, ಭಗೀರಥ ಕಾಡಿನಲ್ಲಿ ಒಂಟಿಕಾಲಲ್ಲಿ ಎರಡು ಕೈಗಳೆನ್ನೆತ್ತಿ ಹಟಯೋಗದಲ್ಲಿ ನಿಂತಿದ್ದನ್ನು ಕಾಣುತ್ತೇವೆ. ಧುಮ್ಮಿಕ್ಕಿ ಹರಿದು ಬರುವ ನೀರನ್ನು ನಿಯಂತ್ರಿಸುವುದಕ್ಕೆ ಶಿವ ತನ್ನ ತಲೆಯನ್ನೊಡ್ಡಿ ನೀರನ್ನು ಹರಿಸಿದ ಗಂಗಾವತಾರಣದ ಪ್ರಸಂಗವಿದು, ಇಲ್ಲಿ ಮಳೆಗಾಲದಲ್ಲಿ ಶಿಲ್ಪದ ಮಧ್ಯ ನೀರು ಹರಿದು, ಬರುತ್ತದೆ. ನೀರು ಹರಿದು ಬರುವ ನದಿಯಲ್ಲಿ ನಾಗರಾಜ ಶಿಲ್ಪಗಳು ಕೈ ಮುಗಿದು ತೇಲಿ ಬರುತ್ತಿವೆ. ಭಗೀರಥ ನಿಂತಿರುವ ಕಾಡಿನಲ್ಲಿ ಆನೆ, ಜಿಂಕೆಗಳಿದ್ದು, ಒಂದು ಮಂಗವಂತೂ ಭಗೀರಥನಂತೆ ಅಣಕಿಸಿ ತೋರುತ್ತಾ ನಿಂತಿದೆ. ನದಿಯ ಆ ದಡದಲ್ಲಿ ದೊಡ್ಡ ಆನೆಯಿದ್ದು ಒಟ್ಟು ಸಂಯೋಜನೆಯನ್ನು ಸಂತುಲಿಸುತ್ತಿದೆ. ನೈಸರ್ಗಿಕವಾಗಿ ಹರಿದು ಬರುವ ನೀರಿನ ಧಾರೆಯನ್ನು ಬಳಸಿಕೊಂಡು ರಚಿಸಿರುವ ಅಂದಿನ ಶಿಲ್ಪಿಯ ಜಾಣ್ಮೆ ಅಪ್ಪಿಷ್ಟಲ್ಲ.

ಗುಡ್ಡದ ಇನ್ನೊಂದು ಗುಹೆಯಲ್ಲಿ ಮಹಿಷಾಸುರ ಮರ್ದಿನಿಯ ಕಾಳಗ ಭಿತ್ತಿಶಿಲ್ಪವಿದೆ. ಮಹಿಷಾಸುರನ ದೇಹ ಪೂರ್ಣ ಮಾನವ ರೂಪದಲ್ಲಿದ್ದು ತಲೆ ಮಾತ್ರ ಕೋಣನದ್ದಿದೆ. ಕೈಯಲ್ಲಿ ಗಧೆಯನ್ನು ಹಿಡಿದು ಧೈರ್ಯದಿಂದ ದುರ್ಗಿಯನ್ನು ಎದುರಿಸುತ್ತಿರುವ ಮಹಿಷಾಸುರನ ಭಂಗಿ ನೋಡುವಂತಿದೆ. ಸಿಂಹದ ಮೇಲೆ ಕುಳಿತು ಹೆದೆಯೇರಿಸಿ ಬಾಣ ಪ್ರಯೋಗಿಸುತ್ತಿದ್ದಾಳೆ ದುರ್ಗಿ. ಈ ಘೋರ ಯುದ್ಧದಲ್ಲಿ ಸುರರೂ ಅಸುರರೂ ಪಾಲ್ಗೊಂಡಿದ್ದು, ಕೆಲವರು ನೆಲಕಚ್ಚಿದ್ದರೆ ಇನ್ನೂ ಕೆಲವರು ಅಸ್ತ್ರ ಪ್ರಯೋಗನಿರತರಾಗಿದ್ದಾರೆ.

ಪಲ್ಲವರ ಭಿತ್ತಿಶಿಲ್ಪಗಳಲ್ಲಿ, ದಿನನಿತ್ಯದ ಸಹಜ ಪ್ರವೃತ್ತಿಗಳು ಕಾಲ್ಪನಿಕ ಅಂಶಗಳು ಸುಂದರವಾದ ಸಂಯೋಜನಾ ಕ್ರಮದಲ್ಲಿ ಬಿಂಬಿತವಾಗಿರುವುದೇ ವಿಶಿಷ್ಟ ಬಗೆಯದು.

ಮಾಮಲ್ಲಪುರಂನ ತೀರದ ದೇವಾಲಯ ಮತ್ತು ಕಂಚಿಯ ಕೈಲಾಸನಾಥ ದೇವಾಲಯ ಸಹ ಪಲ್ಲವರ ಕೊಡುಗೆಗಳೇ. ಚೋಳವಂಶದ ರಾಜರಾಜೇಂದ್ರ ಮತ್ತು ರಾಜರಾಜರ ಕಾಲದ ಗಂಗೈಕೊಂಡ ಚೋಳಪುರಂ ಶಿವದೇವಾಲಯ, ಬಂಗಾಳದ ಮಹಿಪಾಲನನ್ನು ಗೆದ್ದ ನೆನಪಿನ ದೇವಾಲಯ. ಇಲ್ಲಿ ಚೋಳವಂಶದ ರಾಜನಿಗೆ ಶಿವ ತಲೆಗೆ ಹೂವಿನ ರುಮಾಲು ಸುತ್ತುತ್ತಿರುವುದು ಒಂದು ವಿಶೇಷ ಶಿಲ್ಪ.

ಚೋಳರ ಕಾಲದ ಶಿಲ್ಪಿಗಳು, ಕಂಚಿನಲ್ಲಿ ಶಿಲ್ಪಗಳನ್ನು ತಯಾರಿಸುವುದರಲ್ಲಿ ಬಹು ನಿಷ್ಣಾತರು. ಈ ಕಂಚಿನ ಶಿಲ್ಪಗಳ ವಿಷಯ ದೇವ ದೇವತೆಗಳು, ಶಿವ ಪಾರ್ವತಿ, ನಟರಾಜ, ರಾಮ ಲಕ್ಷ್ಮಣ, ಕಾಳಿಯ ಮರ್ದನ ಹೀಗೆ ಎಲ್ಲಾ ದೇವತೆಗಳನ್ನು ಎರಕ ಹೊಯ್ದು ನಿರ್ಮಿಸಿದ್ದಾರೆ. ಚೋಳರ ಕಾಲದ ಹೆಚ್ಚಿನ ಶಿಲ್ಪಗಳು ಲಾಸ್ಟ್‌ವ್ಯಾಕ್ಸ್ ತಾಂತ್ರಿಕತೆಯಲ್ಲಿ ತಯಾರಿಸಿದವು. ಹಬ್ಬ ಹರಿದಿನ, ಆರಾಧನೆಗಳಲ್ಲಿ ಉಪಯೋಗಿಸುವ ಉತ್ಸವ ಮೂರ್ತಿಗಳೇ ಹೆಚ್ಚಿನ ಪಾಲು. ವಟುಗಳಾಕಾರದ ಅಗ್ನಿ ಪಥದಲ್ಲಿ, ಅಗ್ನಿ, ಢಮರು ಹಿಡಿದು, ಗಜಹಸ್ತ, ಅಭಯ ಮುದ್ರೆಯಲ್ಲಿ ತಾಂಡವವಾಡುತ್ತಿರುವ ನಟರಾಜನ ಕಲ್ಪನೆ ಚೋಳ ಶಿಲ್ಪಿಗಳದ್ದೇ. ಒಂದು ಕಾಲನ್ನೆತ್ತಿ, ಇನ್ನೊಂದು ಕಾಲಿನಿಂದ ಅಪಸ್ಮಾರನನ್ನು ತುಳಿಯುತ್ತಿದ್ದು, ಕುಣಿತದ ರಭಸಕ್ಕೆ ತಲೆಗೂದಲು ಬಿಚ್ಚಿ ಹರಡಿಕೊಂಡಿರುವುದನ್ನು ಕ್ರಿಯಾತ್ಮಕವಾಗಿ ಶಕ್ತಿಯುತವಾಗಿ, ಮೂಡಿರುವುದನ್ನು ಅನೇಕ ಪಾಶ್ಚಾತ್ಯ ಶಿಲ್ಪಿಗಳು ಮೆಚ್ಚಿಕೊಂಡಿದ್ದಾರೆ; ವಿಸ್ಮಯಗೊಂಡಿದ್ದಾರೆ.

## ನವ್ಯ ಕಲೆ

ನವ್ಯ ಎಂದರೆ ಹೊಸದು. ಸಾಂಪ್ರದಾಯಿಕವಾಗಿ ಅಥವಾ ರೂಢಿಗತವಾಗಿ ಬಂದಿರುವುದನ್ನು ಬಿಟ್ಟುಕೊಡುವುದು. ರೂಢಿಗತವಾಗಿ ಬಂದಿರುವ ಅಂಶಗಳನ್ನು ಕಾಲ, ಸಮಯ, ಪರಿಸರಕ್ಕೆ ತಕ್ಕಂತೆ ಮಾರ್ಪಡಿಸಿಕೊಳ್ಳುವುದು ರೂಢಿಗತವಾಗಿ ಬಂದಿರುವ

ವಸ್ತು ವಿಷಯಗಳನ್ನು ವೈಯಕ್ತಿಕವಾಗಿ, ಸಾಮೂಹಿಕವಾಗಿ ನೋಡುವ ಬಗೆಯಲ್ಲಿ ಅಥವಾ ಆಸ್ವಾದಿಸುವ ಬಗೆಯಲ್ಲಿ ಆಗುವ ಬದಲಾವಣೆಯೇ ನವ್ಯ. ಒಂದು ಪ್ರಾಂತದ ಸಂಸ್ಕೃತಿಯೊಂದಿಗೆ ಇನ್ನೊಂದು ಪ್ರಾಂತದ ಸಂಸ್ಕೃತಿಯ ವಸ್ತು, ವಿಷಯ, ದೃಶ್ಯ ಭಾಷೆ ಬೆಸೆದುಕೊಂಡಾಗಲೂ ನವ್ಯವಾಗುತ್ತದೆ.

ಭಾರತೀಯ ಶಿಲ್ಪಕಲಾ ಪರಂಪರೆಯಲ್ಲಿ ನವ್ಯತೆ ಪ್ರಾರಂಭವಾಗಿದ್ದು ಬ್ರಿಟಿಷರ ಆಗಮನದ ನಂತರ ಮತ್ತು 20ನೇ ಶತಮಾನದ ಮಧ್ಯ ಭಾಗದಲ್ಲಿ ಎಂದು ಅಭಿಪ್ರಾಯಗಳಿವೆ. ಕಾಲಕಾಲಕ್ಕೆ ಬೇರೊಂದು ಸಂಸ್ಕೃತಿಯಿಂದ ಪ್ರಭಾವಿತಗೊಂಡು ಮತ್ತು ಶಿಲ್ಪಿಯ ಕೈಚಳಕದಿಂದಲೂ ಭಾರತೀಯ ಕಲೆ ನವ್ಯವಾಗುತ್ತಾ ನಡೆದಿದೆ. ನವ್ಯಕಲೆಯಲ್ಲಿ ಖುಷಿ ಕೊಡುವ ಯಾವುದೇ ರೂಪಾಕಾರವನ್ನು ಬಳಸಿ, ಖುಷಿಕೊಡುವುದೇ ಅಲ್ಲದೆ ದೃಶ್ಯಾನುಭವ ನೀಡುವುದೇ ಗುರಿ. ಈ ಕ್ರಿಯೆಯಲ್ಲಿಯೇ ನವ್ಯತೆಯ ಪ್ರಶ್ನೋತ್ತರಗಳು ಅಡಗಿರುವುದು.

ಭಾರತೀಯ ಪರಂಪರೆಯ ಶಿಲ್ಪಿಗಳಲ್ಲಿರುವ ವಸ್ತು ವಿಷಯ, ದೃಶ್ಯಾನುಭವವನ್ನು ನವ್ಯ ಶಿಲ್ಪಿಗಳ ದೃಶ್ಯಾನುಭವದೊಂದಿಗೆ ಚಿಕ್ಕ ತೌಲನಿಕ ಅಭ್ಯಾಸ ಮಾಡಿದಲ್ಲಿ ನವ್ಯ ಕಲೆ ಸ್ಪಷ್ಟವಾಗಿ ಅರ್ಥವಾದೀತು.

ಭಾರತೀಯ ಪರಂಪರೆಯ ಶಿಲ್ಪಗಳಲ್ಲಡಗಿರುವ ಆಂತರಿಕ ಶಕ್ತಿಯೆಂದರೆ ಕಥಾನಕರೂಪ, ಸಾಹಿತ್ಯಿಕ ಅನುಭವ ಮತ್ತು ಇಹಲೋಕದಿಂದ ಪಾರಮಾರ್ಥಿಕ ಲೋಕಕ್ಕೆ ಕರೆದುಕೊಂಡು ಹೋಗುವ ಗುಣ. ಇವುಗಳಲ್ಲಿನ ಶೈಲಿ, ಬಣ್ಣ, ರೇಖೆ, ಮೈವಳಿಕೆ, ಸೌಂದರ್ಯಾನುಭವದ ಪೂರಕ ವ್ಯಂಜನಗಳೇ ಹೊರತು ಅವುಗಳೇ ಶಿಲ್ಪದಲ್ಲಿಯ ಪ್ರಮುಖ ಶಕ್ತಿಯಲ್ಲ.

ಭಾರತೀಯ ಶಿಲ್ಪಕಲೆಯಲ್ಲಿ ಪೌರಾಣಿಕ ವಿಷಯ ಒಳಗೊಂಡ ಉಬ್ಬುಗೆತ್ತನೆಗಳೇ ಹೆಚ್ಚು. ಇದರಲ್ಲಿ ಪೂರ್ಣ ಪ್ರಮಾಣದ ಶಿಲ್ಪವೆಂದರೆ ಗರ್ಭಗುಡಿಯಲ್ಲಿರುವ ಮೂರ್ತಿ. ಇದನ್ನು ಸುತ್ತುವರಿದು ನೋಡುವಂತಿಲ್ಲ. ನಿರ್ದಿಷ್ಟವಾದ ಸ್ಥಳ, ಕೋನದಲ್ಲಿ ನಿಂತು ನೋಡಬೇಕು. ಭಿತ್ತಿಶಿಲ್ಪಗಳು ಬಿಚ್ಚಿಟ್ಟ ಕಥಾರೂಪಕಗಳು, ಮೂರ್ತಿಗಳು ಘನೀಕರಿಸಿದ ಕಥಾನಕಗಳು. ಮಹಿಷ ಮರ್ದಿನಿ, ಉಗ್ರನರಸಿಂಹ, ವರಾಹಗಳಂತಹ ಶಿಲ್ಪಗಳನ್ನು ನೋಡುವಾಗ, ಅವುಗಳಲ್ಲಡಗಿರುವ ಕಥಾವಸ್ತುವನ್ನು ಮನನ ಮಾಡುತ್ತಾ, ಬಿಚ್ಚುತ್ತಾ ಸೌಂದರ್ಯಾನುಭವ ಹೊಂದುತ್ತೇವೆ.

ಹೀಗೆ ಶಿಲ್ಪಿಗಳು ಪುರಾಣದಲ್ಲಿಯ ನಾಟಕೀಯ ವಸ್ತುವನ್ನು ಒಂದು ಕ್ಲೈಮ್ಯಾಕ್ಸ್ ಹಂತದಲ್ಲಿ ಸೆರೆಹಿಡಿದು ಘನೀಕರಿಸಿದ್ದಾರೆ. ಪುರಾಣದಲ್ಲಿಯ ವಿಷಯ ನಮ್ಮ ರಕ್ತದಲ್ಲಿರುವುದರಿಂದ ವಿಷಯ ಬೇಗ ಗ್ರಾಹ್ಯವಾಗಿ ಮೂರ್ತಿ ಸಾಧಾರಣೀಕರಣಗೊಂಡು ಕ್ರಿಯಾತ್ಮಕರೂಪ ಪಡೆಯುತ್ತದೆ. ಜಡತ್ವವನ್ನು ಕಳೆದುಕೊಳ್ಳುತ್ತದೆ. ಈ ಸಂಸ್ಕೃತಿಯ

ವಿಷಯವನ್ನರಿಯದ ಪರಕೀಯ, ಶಿಲ್ಪಗಳಲ್ಲಿ ಆಕಾರ, ರೂಪ, ಸಂಯೋಜನಾತಂತ್ರ, ಶಿಲ್ಪಿಯ ಪರಿಶ್ರಮವನ್ನೇ ಸವಿಯುತ್ತಾನೆ.

ಬ್ರಿಟಿಷರ ಆಗಮನದಿಂದ ದೃಶ್ಯಕಲೆ ಹಂತ ಹಂತದ ಶೈಕ್ಷಣಿಕ ಅಭ್ಯಾಸವಾಗಿ, ಜೀವನೋಪಾಯದ ಮಾರ್ಗವಾಗಿ ಬೆಳೆಯತೊಡಗಿತು. 20ನೇ ಶತಮಾನದ ಮಧ್ಯಭಾಗದಲ್ಲಿ, ಶಿಲ್ಪಿಯು ಹೊಸದನ್ನು ತೋರಬೇಕೆಂಬ ಹಂಬಲ, ಅಂತರರಾಷ್ಟ್ರೀಯ ಕಲಾ ಪ್ರವಾಹದಲ್ಲಿ ಒಂದಾಗಬೇಕೆನ್ನುವ ಆಸೆ, ಅನನ್ಯತೆ, ಶಿಲ್ಪಿಯ ಸ್ಪರ್ಧಾತ್ಮಕ ದೃಷ್ಟಿ ನವ್ಯತೆಗೆ ಮೂಲ ಕಾರಣಗಳಾದವು. ಶಿಲ್ಪ ಎಂದರೇನು? ಶಿಲ್ಪಕ್ಕೆ ಇರಬೇಕಾದ ಗುಣಲಕ್ಷಣಗಳೇನು? ಎಂಬ ಅನೇಕ ಪಾಶ್ಚಾತ್ಯ ಅಭಿಪ್ರಾಯಗಳು ಅನುಕರಣೆಯಾಗತೊಡಗಿದವು. ವೈಜ್ಞಾನಿಕ ಆವಿಷ್ಕಾರಗಳೊಂದಿಗೆ ಹೊಸ ಹೊಸ ಮಾಧ್ಯಮಗಳಲ್ಲಿ ಶಿಲ್ಪಗಳು ಅರಳುತ್ತ ನಡೆದಿರುವುದೇ ನವ್ಯ ಶಿಲ್ಪಿಗಳ ವೈಶಿಷ್ಟ್ಯ.

ನವ್ಯ ಶಿಲ್ಪಕಲೆ ಕಲ್ಲು, ಮಣ್ಣು, ಮರ, ಲೋಹ, ಲೋಹದ ತುಂಡುಗಳು, ಗೋಣಿತಟ್ಟು, ಫೈಬರ್‌ಗ್ಲಾಸ್, ರಬ್ಬರ್, ಪ್ಲಾಸ್ಟಿಕ್, ಪ್ಲಾಸ್ಟರ್ ಇತ್ಯಾದಿ ಘನಾಕಾರ ಪಡೆಯುವ ಯಾವುದೇ ಪದಾರ್ಥದಲ್ಲಿ ಅರಳಬಹುದಾಯಿತು. ಎಲ್ಲಾ ಶಿಲ್ಪಗಳನ್ನು ಶಿಲ್ಪಿ ಕೈಯಿಂದಲೇ ಮಾಡಬೇಕೆಂಬ ಕಡ್ಡಾಯವೇನಿಲ್ಲಾ. ತನ್ನ ಸುತ್ತಲಿರುವ, ರೆಡಿಮೇಡ್ ಆಗಿ ಸಿಗುವ ವಸ್ತುಗಳನ್ನು ತಂದು, ಅರ್ಥ, ಕಲ್ಪನೆ ಕೆರಳುವ ಹಾಗೆ ಪ್ರದರ್ಶಿಸಿದರೆ ಅದು ರೆಡಿಮೇಡ್ ಶಿಲ್ಪ ಪ್ರಕಾರವಾಗುತ್ತದೆ. ಶಿಲ್ಪಿಗೆ; ಇದು ಶಿಲ್ಪವೆಂದು ಹೇಳುವಷ್ಟು; ಸಹೃದಯಿ ಅದನ್ನು ಶಿಲ್ಪವೆಂದು ಆಸ್ವಾದಿಸುವಷ್ಟು ಅಂಶ ಅದರಲ್ಲಿದ್ದರೆ ಸಾಕು, ಅದೊಂದು ಶಿಲ್ಪ ಎನ್ನುವ ಅಭಿಪ್ರಾಯಗಳೂ ಇವೆ.

ನವ್ಯ ಶಿಲ್ಪಕಲೆಯಲ್ಲಿ, ಶಿಲ್ಪಕೃತಿಯೆನ್ನಲು ಈ ಕೆಳಗಿನ ಯಾವುದಾದರೂ ಒಂದು ಅಂಶ ಅದರಲ್ಲಿದ್ದರೆ ಸಾಕು, ಅದನ್ನು ಶಿಲ್ಪವೆಂದು ಪರಿಗಣಿಸಬಹುದು.

1. ಕಲಾಕೃತಿ ತ್ರಿಮಾನಾಕೃತಿಯಲ್ಲಿದ್ದರೆ.

2. ಕಲಾಕೃತಿ ನಿಜವಾದ ಸ್ಥಳಾವಕಾಶವನ್ನು (Space) ಆವರಿಸಿಕೊಂಡಿದ್ದರೆ.

3. ಕಲಾಕೃತಿಗೆ ಸ್ಪರ್ಶಾನುಭವವಿದ್ದರೆ.

4. ಕಲಾಕೃತಿಯನ್ನು ಸುತ್ತುವರಿದು ನೋಡುವುದಕ್ಕೆ ಅವಕಾಶವಿದ್ದರೆ.

ಪ್ರದರ್ಶನಾಂಗಣದಲ್ಲಿ ಒಂದು ಕೃತಿಯನ್ನು ಅಂಕಣದ ಮಧ್ಯದಲ್ಲಿಟ್ಟರೆ ಶಿಲ್ಪವೆಂತಲೂ, ಅದೇ ಕೃತಿಯನ್ನು ಗೋಡೆಗೆ ನೇತು ಹಾಕಿದಲ್ಲಿ ಉಬ್ಬು ಶಿಲ್ಪವೆಂತಲೂ ಅಥವಾ ಪೇಂಟಿಂಗ್ ಎಂತಲೂ ಭಾವಿಸಬಹುದು. ಉದಾಹರಣೆಗೆ ಪಾರದರ್ಶಕ ಗಾಜಿನ ಮೇಲೆ

ರಚಿಸಿದ ವರ್ಣಚಿತ್ರವನ್ನು ಪ್ರದರ್ಶನಾಂಗಣದ ಮಧ್ಯದಲ್ಲಿರಿಸಿದರೆ ಶಿಲ್ಪವೆಂತಲೂ, ಗೋಡೆಗೆ ನೇತು ಹಾಕಿದಲ್ಲಿ ವರ್ಣಚಿತ್ರವೆಂತಲೂ ಪರಿಗಣಿಸುವುದು ಸೂಕ್ತ.

ಆಧುನಿಕ ಶಿಲ್ಪಿ ತನ್ನ ಕೃತಿಯಲ್ಲಿ ವೈಯಕ್ತಿಕ ಕನಸು, ವಿಚಾರವನ್ನು ಹೇಳುತ್ತಿರಬಹುದು. ತನಗೆ ಇಷ್ಟವಾದ ಆಕಾರ ರೂಪಗಳನ್ನು ತನಗೆ ಬೇಕಾದ ಹಾಗೆ, ತನಗೆ ತೃಪ್ತಿಯಾಗುವವರೆಗೆ ಮಾಡಿರುತ್ತಾನೆ. ಎಲ್ಲಾ ರೂಪಾಕಾರಗಳಿಗೆ ಸಾಹಿತ್ಯಿಕ ರೂಪ ಅರ್ಥವಿರಬೇಕೆಂದೇನಿಲ್ಲ. ಆದಾಗ್ಯೂ ಸಹ ಶಿಲ್ಪಿ ನೀಡುವ ಪ್ರತಿ ರೂಪಾಕಾರಕ್ಕೆ ಭಾವ, ಚಲನಾಶಕ್ತಿ, ಸುಂದರತೆ, ಇರುವುದನ್ನು ಅಲ್ಲಗಳೆಯುವಂತಿಲ್ಲ. ಉದಾಹರಣೆಗೆ, ನಿಸರ್ಗದಲ್ಲಿರುವ ಬೆಟ್ಟ, ಮರ, ಹೂ ನೋಡಿ ಆನಂದಿಸುವುದಿಲ್ಲವೆ? ಅವು ಮನೋಹರವಾಗಿಲ್ಲವೆ? ಅವುಗಳಿಗೆಲ್ಲಾ ಅರ್ಥವಿದೆಯೇ? ಅಂತೆಯೇ ನವ್ಯ ಶಿಲ್ಪಗಳನ್ನು 'ಶುದ್ಧ ರೂಪಾಕಾರ'ದಲ್ಲಿ ನೋಡಿ ಆನಂದಿಸುವುದು ಒಳಿತು.

ಕೆಲವರು ಶಿಲ್ಪಿಯ ಕೆಲವೊಂದು ಕೃತಿಗಳನ್ನು ನೋಡಿ ನಮಗೆ ಅರ್ಥವೇ ಆಗಲಿಲ್ಲವೆನ್ನುತ್ತೇವೆ. ಶಿಲ್ಪಿ ವಸ್ತು ವಿಷಯವನ್ನು ಕಂಡು ಕಂಡೂ ವಿವರಣಾತ್ಮಕವಾದ ಎಲ್ಲಾ ಅಂಶಗಳನ್ನು ಕಡಿತಗೊಳಿಸಿ, ಸರಳವಾದ; ಸತ್ವಸೂಚಿ ರೂಪಕ್ಕಿಳಿಸಿರುತ್ತಾನೆ. ವಿವರದಿಂದ ಸಂಕ್ಷಿಪ್ತದೆಡೆಗೆ ಬರುವ ಎಲ್ಲಾ ಹಂತಗಳು (Frames) ಶಿಲ್ಪದಲ್ಲಿಯೇ ಅಡಗಿ ಹೋಗುವುದರಿಂದ, ಕೊನೆಯ ಹಂತದ ಸರಳ ಸ್ವರೂಪ ನಮ್ಮ ಮುಂದೆ ಬಂದಾಗ, ಅದು ತಿಳಿಯದಂತಾಗುತ್ತದೆ. ಗುಹಾಚಿತ್ರಗಳಲ್ಲಿ ವಿವರಣಾತ್ಮಕವಾದ ಮನುಷ್ಯನ ಕೈ, ಕಾಲು, ಕಣ್ಣು, ಮೂಗು, ಬೆರಳು ಎಲ್ಲ ಸಂಕ್ಷಿಪ್ತಗೊಂಡ ಕಡ್ಡಿರೂಪದ ಚಿತ್ರವನ್ನು ನೋಡಿ 'ಮನುಷ್ಯ'ನೆಂಬ ಸತ್ವದಿಂದ ನೋಡುತ್ತೇವೆಯಲ್ಲವೆ! ಹೀಗೆ ವಿವಿಧಾತ್ಮಕತೆಯಿಂದ ಸಂಕ್ಷಿಪ್ತ ರೂಪಕ್ಕೆ ತರುವುದು ನವ್ಯಶಿಲ್ಪಕಲೆಯ ಒಂದು ಪ್ರಮುಖ ಲಕ್ಷಣ.

ಕ್ಷಣದ ಅನುಭವವನ್ನು, ತುಂಡು ಅನಿಸಿಕೆಗಳನ್ನು ಚಲನವಲನದ ಕ್ರಿಯೆಗಳನ್ನು ಸೆರೆಹಿಡಿಯುವುದು ನವ್ಯಕಲೆಯ ಇನ್ನೊಂದು ಮುಖ. ಹಕ್ಕಿ ಹಾರುತ್ತಿದೆ ಎನ್ನುವಲ್ಲಿ, ಹಕ್ಕಿ ಹಾರುವ ಆ ಕ್ಷಣ ಆ ಚಲನೆ ಮುಖ್ಯ ಹೊರತು ಹಕ್ಕಿಯಲ್ಲ. ಅದರಂತೆ ಲೋಹ ಕರಗುತ್ತಿರುವುದು, ಮೆಲ್ಲನೆ ಮೇಣ ಹರಿದು ತೊಟ್ಟಿಕ್ಕುವುದು. ಪ್ರತಿಫಲನ ನೀಡುವ ವಸ್ತುಗಳಲ್ಲಿ ಸುತ್ತಲ ಪರಿಸರದ ವಿಕೃತರೂಪಗಳನ್ನು ಕೃತಿಯ ಅಂಗವಾಗಿ ಪರಿಗಣಿಸುವುದು. ನಮ್ಮ ಸಂಸ್ಕೃತಿಯಲ್ಲಿ ಕಥಾನಕ ರೂಪ ಎಷ್ಟು ಬೆಳೆದಿದೆಯೆಂದರೆ, ತುಣುಕು ಸಂವೇದನೆಯ ಶಿಲ್ಪಗಳನ್ನು ಇವು ಶಿಲ್ಪಗಳೇ ಎನ್ನುವಷ್ಟು ಕಥಾನಕ ಹಂದರದಿಂದ ಹೊರ ಬಂದಾಗ ಮಾತ್ರ ಈ ತುಣುಕು ಸಂವೇದನೆ ಅನುಭವಿಸಲು ಸಾಧ್ಯ.

ಆಧುನಿಕ ಶಿಲ್ಪ ಕಲೆಯಲ್ಲಿ ಸಾಮಾನ್ಯ ವಸ್ತು ವಿಷಯವನ್ನು ಉತ್ಪ್ರೇಕ್ಷಿಸಿ, ಅತಿಶಯೋಕ್ತಿಯಿಂದ ತೋರಿಸುವುದು ಕಾಣುತ್ತೇವೆ. ಬಟ್ಟೆ ಒಣಹಾಕಲು ಉಪಯೋಗಿಸುವ

ಸಣ್ಣ ಕ್ಲಿಪ್‌ನ್ನು ದೊಡ್ಡ ಪ್ರಮಾಣದಲ್ಲಿ ಶಿಲ್ಪವಾಗಿ ರಚಿಸುವುದು. ಹೀಗೆ ಬಾಳೆಹಣ್ಣು, ಇರುವೆಯಂತಹ ವಸ್ತು ಅಗಾಧ ರೂಪ ಪಡೆಯುವ ಸಾಧ್ಯತೆ ಇದೆ. ಇದೊಂದು ರೀತಿಯ ಶಾಕ್ ಕೊಡುವ ಯತ್ನ. ಅಂದರೆ ಶಿಲ್ಪ ನೋಡಿ 'ಆ್ಹ' ಎಂದಿರಬೇಕು. ಇದೂ ಸಹ ಅಭಿವ್ಯಕ್ತಿಯ ತಂತ್ರ.

ಆದಿಮಾನವನ (ಬುಡಕಟ್ಟು,Tribal Art )ಶಿಲ್ಪ ಕಲಾತಂತ್ರಗಳು, ಮತ್ತು ಜನಪದ ಶಿಲ್ಪತಂತ್ರಗಳು ಕೂಡಾ ಆಧುನಿಕ ಕಲೆಯಲ್ಲಿ ಮಿಳಿತಗೊಂಡಿವೆ. ಬುಡಕಟ್ಟು ಮತ್ತು ಜನಪದ ಶಿಲ್ಪಗಳಲ್ಲಿ 'ಭಾವ' ಶಕ್ತಿಪೂರಿಕ ಒತ್ತಡದ ಅಭಿವ್ಯಕ್ತಿಯಾಗಿರುತ್ತದೆ. ಎಲ್ಲಮ್ಮ, ಮಾರಮ್ಮ, ದುರಗಮ್ಮನಂಥ ಶಿಲ್ಪಗಳಲ್ಲಿ ಕಣ್ಣು, ಮೂಗು, ನಾಲಗೆಯಲ್ಲಿ, ಭಯದ ಭಾವ ಹೇಗೆ ಚಿಮ್ಮುತ್ತಿರುತ್ತದೆಯೋ, ಹಾಗೆಯೇ ದಿಟ್ಟವಾಗಿ ಹೇಳುವುದಕ್ಕೆ ಆಧುನಿಕ ಶಿಲ್ಪಗಳಲ್ಲಿ ಬಳಸಿಕೊಂಡಿರುವುದು ಕಾಣುತ್ತೇವೆ.

ಆಧುನಿಕ ಕೆಲ ಶಿಲ್ಪಗಳಲ್ಲಿ ಉಳಿಯ ಪೆಟ್ಟನ್ನು, ರಚನಾ ಕ್ರಮವನ್ನು ಹಾಗೆಯೇ ಹಸಿ ಹಸಿಯಾಗಿ ಬಿಟ್ಟಿರುವುದು ಕಾಣುತ್ತೇವೆ. ಅದು ಶಿಲ್ಪಿ ರಚನಾ ಕ್ರಮದಲ್ಲಿ ಅನುಭವಿಸಿದ ಭಾವವನ್ನು ನಮ್ಮೊಂದಿಗೆ ಹಂಚಿಕೊಳ್ಳುವುದು ಮತ್ತು ಅದು ಅವನ ಶೈಲಿಯೂ ಆಗುತ್ತದೆ.

ವಸ್ತು, ವಿಷಯ, ರೂಪ, ಆಕಾರ, ಮಾಧ್ಯಮ, ರಚನಾಕ್ರಮ ಇವುಗಳ ಪ್ರತಿಹಂತದಲ್ಲೂ ಆಧುನಿಕ ಶಿಲ್ಪಿ ತನ್ನ ವೈಯಕ್ತಿಕ ಛಾಪನ್ನು ನೀಡಬಯಸುತ್ತಾನೆ (ಕಲೆ ವ್ಯಾವಹಾರಿಕ ಸರಕು ಆಗಿರುವುದರಿಂದ ವೈಯಕ್ತಿಕ ಛಾಪು ಅನಿವಾರ್ಯ). ಪ್ರತಿಶಿಲ್ಪಿ ತನ್ನದೇ ಆದ ತತ್ವಶಾಸ್ತ್ರ(philosophy)ವನ್ನು ಮತ್ತು ಪಂಥವನ್ನು ಗುರುತಿಸಿಕೊಂಡು ಶಿಲ್ಪ ರಚಿಸುತ್ತಿರುವುದರಿಂದ, ಒಂದು ಶಿಲ್ಪಕೃತಿಯನ್ನು ಪೂರ್ಣಪ್ರಮಾಣದಲ್ಲಿ ಆನಂದಿಸಬೇಕಾದರೆ ಕೃತಿರಚಿಸಿದ ಶಿಲ್ಪಿಯೊಂದಿಗೆ ನಮ್ಮ ಒಡನಾಟವಿರಬೇಕು, ಇಲ್ಲವೆ ಶುದ್ಧರೂಪಾಕೃತಿ ನೋಡಿ ಆನಂದಿಸುವ ಅಭ್ಯಾಸ ಬೆಳೆಸಿಕೊಂಡಿರಬೇಕು. ಹಾಗಾದಾಗ ಆಧುನಿಕ ಶಿಲ್ಪಗಳಲ್ಲಿರುವ ಸತ್ವವನ್ನು ಅನುಭವಿಸಲು, ಆನಂದಿಸಲು ಸಾಧ್ಯವಾದೀತು.

ಇಂದು ಕಲೆ ಹಾಗೂ ಜನಸಾಮಾನ್ಯರ ನಡುವೆ ಭಾರೀ ಅಂತರವಿದೆ. ಇಂದಿನ ಸಮಕಾಲೀನ ಕಲೆಯು ಜನಸಾಮಾನ್ಯರಿಗೆ ಅರ್ಥವಾಗದಿರುವುದೇ ಇದಕ್ಕೆ ಕಾರಣ ಎಂದು ಹಲವರ ಅಭಿಪ್ರಾಯ. ದೃಶ್ಯ ಕಲೆಗಳನ್ನು ಆಸ್ವಾದಿಸುವ ದೃಷ್ಟಿಯಿಂದ ನಮ್ಮ ಸಾಮಾನ್ಯ ಶಿಕ್ಷಣದಲ್ಲೂ ಗಂಭೀರ ಪ್ರಯತ್ನಗಳು ನಡೆಯುತ್ತಿಲ್ಲ. ಅಂತೆಯೇ ಈ ಕೊರತೆಗಳನ್ನು ಸ್ವಲ್ಪವಾದರೂ ತುಂಬುವುದು ಈ ಜನಪ್ರಿಯ ಕಲಾಮಾಲಿಕೆಯ ಆಶಯ. ಹೀಗೆ ಸಾಮಾನ್ಯರಿಗೆ ದೃಶ್ಯಕಲೆಗಳ ಪ್ರಾಥಮಿಕ ಜ್ಞಾನ ಒದಗಿಸುವ ದೃಷ್ಟಿಯಿಂದಲೇ ಇದನ್ನು ರೂಪಿಸಲಾಗಿದೆ. ಇದರಲ್ಲಿ ದೃಶ್ಯಕಲೆಯ ತಾತ್ವಿಕ ಅಂಶಗಳು, ಮಾಧ್ಯಮಗಳು, ತಂತ್ರಗಳು, ಇತಿಹಾಸ, ಆಧುನಿಕ ಕಲಾ ಪಂಥಗಳು ಇತ್ಯಾದಿ ಹಲವು ವಿಷಯಗಳನ್ನು ಕುರಿತಂತಹ ಹೊತ್ತಿಗೆಗಳನ್ನು ತರುತ್ತಿದ್ದೇವೆ. ತನ್ಮೂಲಕ ದೃಶ್ಯಕಲೆಯನ್ನು ಆಸ್ವಾದಿಸುವ ದಿಸೆಯಲ್ಲಿ ಹೆಚ್ಚಿನ ಜನರು ತೊಡಗುತ್ತಾರೆಂಬ ಮಹತ್ವಾಕಾಂಕ್ಷೆ ಈ ಮಾಲಿಕೆಯದು. ಹೀಗೆ ಜನರನ್ನು 'ಸಹೃದಯ' ರನ್ನಾಗಿಸುವ ದಿಸೆಯಲ್ಲಿ ಇದೊಂದು ಪುಟ್ಟ ಪ್ರಯತ್ನ.

ಚಿ. ಸು. ಕೃಷ್ಣ ಸೆಟ್ಟಿ
ಸಂಪಾದಕರು